ಕರ್ನಾಟಕ ಲಲಿತಕಲಾ ಅಕಾಡೆಮಿ

ಪುರುಷೋತ್ತಮ ಕಾರಂತ

Purushotham karanth



ಬಿ. ಗಣೇಶ ಸೋಮಯಾಜಿ

B. Ganesh Somayaji

ಪುರುಷೋತ್ತಮ ಕಾರಂತ

Purushotham Karanth

ಪೀಟರ್ ಲೂಯಿಸ್

ಪ್ರಧಾನ ಸಂಪಾದಕರು

ಬಿ. ಗಣೇಶ ಸೋಮಯಾಜಿ

ಲೇಖಕರು

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

Purushotham Karanth - A monograph by B. Ganesha Somyaji; Secretary, Artists Combine (R), Ballal Bagh, M.G. Road, Mangalore - 575 003 and Published by Shri B.T. Munirajaiah, Registrar, Karnataka Lalithakala Academy, Kannada Bhavana, J.C. Road, Bangalore - 560 002. Tel: 080-22480297

First Edition: 2004

Translated by: Shri Haragi Sadananda Hegade

Pages: 48 + 8

Price: **Rs. 40/-**



ಮುಖಚಿತ್ರ: ಪುರುಷೋತ್ತಮ ಕಾರಂತರ
"ಬುದ್ಧಪೂರ್ಣಿಮೆ" ಕಲಾಕೃತಿ
ವಿನ್ಯಾಸ: ಶ್ರೀ ಸುಧಾಕರ ದರ್ಬೆ

ಮುದ್ರಕರು: ಸಿದ್ಧೇಶ್ವರ ಪ್ರಿಂಟರ್ಸ್
ಕಾಟನ್‌ಪೇಟೆ, ಬೆಂಗಳೂರು - 560 053.
ದೂರವಾಣಿ: 080-26705793

ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಕೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ. ಎಸ್. ದಂಡಾವತಿಮಠ ಹಾಗೂ ಡಾ|| ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ **'ಕಲಾವಾರ್ತೆ'** ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. **ಕಲಾವಿದರ ಮಾಲಿಕೆಯಲ್ಲಿ** ಒಂಬತ್ತು ಜನ ಹಿರಿಯ ಕಲಾವಿದರಾದ ಕೆ. ಕೇಶವಯ್ಯ, ಎಸ್. ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ|| ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ಜನಪ್ರಿಯ ಕಲಾಮಾಲೆಯ** ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟ ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ|| ಎಸ್.ಸಿ. ಪಾಟೀಲರು. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಇನ್ನೊಂದು ಗ್ರಂಥ ಭಾವಚಿತ್ರ ಪರಂಪರೆಯ **'ಮುಖಗಳೊಂದಿಗೆ ಮುಖಾಮುಖಿ'** ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂ ರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾಡೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗುಮಾಡಿದ ಸದಸ್ಯ ಶ್ರೀ ಪ.ಸ.ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ , ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಪೀಟರ್ ಲೂಯಿಸ್

ಲೇಖಕರ ಮಾತು

ಈ ಪುಸ್ತಕ ಬರೆಯಲು, ನನ್ನ ಬಹುಕಾಲದ ಗೆಳೆಯರಾದ ಪುರುಷೋತ್ತಮ ಕಾರಂತರ ಬಗ್ಗೆ ಸಮಾಜಕ್ಕೆ ತಿಳಿಸಲು ನನಗೆ ತುಂಬ ಹರ್ಷವಾಗುತ್ತಿದೆ. ಕಾರಂತರನ್ನು, ಅವರ ಚಿತ್ರವನ್ನು ನನ್ನ ಪರಿಮಿತಿಯಲ್ಲಿ ತಿಳಿದುಕೊಂಡು ನಿಮ್ಮೆದುರಿಗೆ ಚಿತ್ರಿಸಿದ್ದೇನೆ. ಅವರ ಇತರ ನಿಕಟವರ್ತಿಗಳಿಗೆ ಅಥವಾ ಸ್ವತಃ ಕಾರಂತರಿಗೆ ಈ ಬಗ್ಗೆ ಭಿನ್ನಾಭಿಪ್ರಾಯ ಇರಲೂಬಹುದು. ನಾನು ನೋಡಿದ ಕಾರಂತರು ಇನ್ನೊಂದಿಷ್ಟು ಬೇರೆಯೇ ಆಗಿದ್ದಾರೆ ಎಂದು ಅಭಿಪ್ರಾಯಪಡುವವರ ಬಗ್ಗೆ ನನ್ನ ಆಕ್ಷೇಪ ಏನೂ ಇಲ್ಲ.

ಇಂಥ ಒಂದು ಅವಕಾಶವನ್ನು ನನಗೆ ನೀಡುವಲ್ಲಿ ದೊಡ್ಡ ಮನಸ್ಸು ಮಾಡಿದ ಅಕಾಡೆಮಿಯ ಅಧ್ಯಕ್ಷ ಶ್ರೀಪೀಟರ್ ಲೂಯಿಸ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ರೂಪುರೇಖೆಯನ್ನು ಸಿದ್ಧಪಡಿಸುವಲ್ಲಿ ನನಗೆ ಮಹತ್ವದ ವಿಚಾರವನ್ನು ತಿಳಿಸಿದ್ದಲ್ಲದೆ ನನ್ನೊಟ್ಟಿಗೆ ಕಾರಂತರಿದ್ದಲ್ಲಿಗೂ ಬಂದು ಸಹಕರಿಸಿದ ಕಲಾವಿದ ಪತ್ರಕರ್ತ ಹರಗಿ ಸದಾನಂದ ಹೆಗಡೆಯವರನ್ನು ಮೊತ್ತಮೊದಲಿಗೆ ನಾನು ಸ್ಮರಿಸುತ್ತೇನೆ.


ಈ ಪುಸ್ತಕಕ್ಕೆ, ಚಿತ್ರಗಳಿಗೆ ಸಹಕರಿಸಿದ ಶ್ರೀಕೀರ್ತಿ ಹಾಗೂ ಇತರರಿಗೆ ಮತ್ತು ಇಂಗ್ಲೀಷ್ ಭಾಷಾಂತರದಲ್ಲಿ ಸಹಕರಿಸಿದ ಹರಗಿ ಸದಾನಂದ ಹೆಗಡೆಯವರಿಗೆ ನಾನು ಕೃತಜ್ಞನಾಗಿದ್ದೇನೆ.

ನನ್ನ ದೃಷ್ಟಿಯಲ್ಲಿ ಕಂಡ ಪುರುಷೋತ್ತಮ ಕಾರಂತರು ಹೀಗಿದ್ದಾರೆ ಎಂದು ಯಾವುದೇ ಗೊಂದಲವಿಲ್ಲದೆ ಈ ಬರಹ ನಿಮಗೆ ಒಪ್ಪಿಸಲು ಮತ್ತೊಮ್ಮೆ ಖುಷಿ ಪಟ್ಟು ಈ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ.

ಬಿ. ಗಣೇಶ ಸೋಮಯಾಜಿ








ಪುರುಷೋತ್ತಮ ಕಾರಂತ / Purushotham Karanth

ಗಣೇಶ್ ಸೋಮಯಾಜಿ



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ೧೯೪೯ರಲ್ಲಿ ಜನಿಸಿದ ಶ್ರೀ ಗಣೇಶ ಸೋಮಯಾಜಿ ಅವರು ಖ್ಯಾತ ಕಲಾವಿದ ಶ್ರೀ ಬಿ.ಜಿ. ಮೊಹಮ್ಮದ್ ಅವರಲ್ಲಿ ಚಿತ್ರಕಲಾಭ್ಯಾಸ ಪೂರೈಸಿ ೧೯೭೩ರಲ್ಲಿ ಕಲಾ ಡಿಪ್ಲೊಮಾ ಪದವಿಯನ್ನು ರಾಜ್ಯಕ್ಕೆ ಪ್ರಥಮ ರ‍್ಯಾಂಕ್‌ನಲ್ಲಿ ಪಡೆದರು. ಕಳೆದ ಇಪ್ಪತ್ತೈದು ವರ್ಷಗಳಿಂದ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವಾರು ಸಮೂಹ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ರಾಜ್ಯ ಹೊರ ರಾಜ್ಯಗಳಲ್ಲಿ ಹಲವಾರು ಏಕವ್ಯಕ್ತಿ ಪ್ರದರ್ಶನ ಸಹ ಯಶಸ್ವಿಯಾಗಿ ನೆರವೇರಿಸಿದ್ದಾರೆ. ೧೯೮೫ರ ವಿಶ್ವ ಕನ್ನಡ ಸಮ್ಮೇಳನದ ಕಲಾ ಶಿಬಿರದಲ್ಲಿ, ೧೯೮೫ ಹಾಗೂ ೮೯ರಲ್ಲಿ ವೆಂಕಟಪ್ಪ ಕಲಾ ಶಾಲೆಯಲ್ಲಿ ನಡೆದ ಕಲಾ ಶಿಬಿರಗಳಲ್ಲಿ, ೧೯೯೦ರಲ್ಲಿ ಮಣಿಪಾಲದಲ್ಲಿ ನಡೆದ "ಹಸ್ತ ಶಿಲ್ಪ" ಕಲಾಗಾರದಲ್ಲಿ ಶ್ರೀ ಸೋಮಯಾಜಿ ಅವರು ಸಕ್ರಿಯವಾಗಿ ಪಾಲುಗೊಂಡು ಕೃತಿ ರಚನೆ ಮಾಡಿದ್ದಾರೆ ಅಲ್ಲದೆ ತಮ್ಮ ಪ್ರದೇಶದಲ್ಲಿ ಹಲವಾರು ಕಲಾ ಶಿಬಿರಗಳನ್ನು ಆಯೋಜಿಸಿದ್ದಾರೆ. ರಾಜ್ಯ ಲಲಿತ ಕಲಾ ಅಕಾಡೆಮಿಗೆ ೧೯೯೫-೯೮ ರ ಅವಧಿಯಲ್ಲಿ ಸದಸ್ಯರಾಗಿದ್ದರು.

ಶೈಕ್ಷಣಿಕವಾಗಿ ಕಳೆದ ೩೫ ವರ್ಷಗಳಿಂದ ರೋಜಾರಿಯ ಪ್ರೌಢಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಗಣೇಶ ಸೋಮಯಾಜಿ ಅವರಿಗೆ ೧೯೯೩ರಲ್ಲಿ "ಉತ್ತಮ ಚಿತ್ರಕಲಾವಿದ" ಪ್ರಶಸ್ತಿ ಹಾಗೂ ೨೦೦೨ರಲ್ಲಿ "ಜನ ಮೆಚ್ಚಿದ ಶಿಕ್ಷಕ" ಪ್ರಶಸ್ತಿಯೂ ರಾಜ್ಯ ಸರ್ಕಾರದಿಂದ ಪ್ರಪ್ರಥಮವಾಗಿ ದೊರೆತಿದೆ. ಮಂಗಳೂರಿನ "ಸಂದೇಶ ಪ್ರತಿಷ್ಠಾನ"ರವರು ಕೊಡ ಮಾಡುವ "ಉತ್ತಮ ಶಿಕ್ಷಕ" ಪ್ರಶಸ್ತಿ ೨೦೦೩ರಲ್ಲಿ ಪ್ರಥಮವಾಗಿ ಶ್ರೀಯುತರಿಗೇ ಸಂದಿದೆ. ಇವಲ್ಲದೆ ಮೂಡಬಿದರಿಯ "ಕಾ.ವಾ. ಆಚಾರ್ಯ ವಿದ್ಯಾರ್ಥಿ ಟ್ರಸ್ಟ್" ಅವರ "ಕಲಾನಿಧಿ" ಪ್ರಶಸ್ತಿ ೨೦೦೩ರಲ್ಲಿ ಪಡೆದಿದ್ದಾರೆ. ಚಿತ್ರಕಲೆಗಾಗಿ ಮೈಸೂರು ದಸರಾ ಸೇರಿದಂತೆ ಹಲವಾರು ಕಡೆಗಳಲ್ಲಿ ಬಹುಮಾನಗಳು ಬಂದಿದೆ. ಕಲಾಪರವಾದ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಶ್ರೀ ಸೋಮಯಾಜಿ ಅವರು ಕಲೆಯ ಬಗ್ಗೆ ಪುಸ್ತಕ ಸಹ ರಚಿಸಿದ್ದಾರೆ. ಕಲಾ ಶಿಕ್ಷಕ, ಕಲಾವಿದ, ಕಲಾ ಸಂಘಟಕಕಾರರಾಗಿ ಕಳೆದ ಮೂರು ದಶಕಗಳಿಂದ ಚಿತ್ರಕಲಾ ಶಿಕ್ಷಕರ ಸಂಘಟನೆ ಬೆಳೆಸಲು ಹಾಗೂ ಆರ್ಟಿಸ್ಟ್ ಕಂಬೈನ್ಸ್‌ನ ಸ್ಥಾಪಕ ಕಾರ್ಯದರ್ಶಿಯಾಗಿ ಶ್ರಮಿಸುತ್ತಿರುವ ಶ್ರೀಯುತರು ಸಂಗೀತ ಕ್ಷೇತ್ರದಲ್ಲಿಯೂ ಪಾರಂಗತರಾಗಿದ್ದಾರೆ.


ಶ್ರೀ ಸೋಮಯಾಜಿ ಅವರು ಹಲವಾರು ಮಾಧ್ಯಮಗಳಲ್ಲಿ ಕೃತಿ ರಚನೆ ಮಾಡಿರುವರಾದರೂ ಜಲವರ್ಣದಲ್ಲಿ ರಚಿಸಿರುವ ಭೂದೃಶ್ಯಗಳು, ಸಮುದ್ರ ದೃಶ್ಯಗಳು ಜನ ಮನ್ನಣೆಗಳಿಸಿವೆಯಲ್ಲದೆ ವಿಮರ್ಶಕರಿಂದಲೂ ಪ್ರಶಂಸೆಗಳಿಸಿವೆ. ನವೋದಯ ಕಾಲದ ರಮ್ಯ ವಾತಾವರಣವನ್ನು ನೆನಪಿಸುವ ಭೂದೃಶ್ಯಗಳು ಹಿತಮಿತವಾದ ವರ್ಣಗಳಿಂದ ಕೂಡಿದ್ದು ಪ್ರೌಢತೆಯನ್ನುಗಳಿಸಿವೆ.

ಪುರುಷೋತ್ತಮ ಕಾರಂತ

ಕಲಾವಿದ ಪುರುಷೋತ್ತಮ ಕಾರಂತರಲ್ಲಿರುವ ಕಲಾವಿದನ ಮೇಲೆ ಇವರ ವಿರಕ್ತಿ ಜೀವನದ ವಿಶೇಷ ಛಾಯೆ ಇಲ್ಲ ಎನ್ನುತ್ತಲೇ ಈ ಬರಹ ಆರಂಭಿಸುತ್ತಿದ್ದೇನೆ. ನಿಜ ಜೀವನದಲ್ಲಿ ಇವರಲ್ಲಿನ ವಿರಕ್ತ ಒಂದು ಹಂತದಲ್ಲಿ ಕಲಾ ರಸಿಕನಲ್ಲಿ ಲೀನವಾಗಿರುವುದನ್ನು ಗುರುತಿಸಬಹುದು. ಇನ್ನೊಂದೆಡೆ ಇವರ ಕಲಾ ಸಂವೇದನೆಗಳು ಮತ್ತಷ್ಟು ಆಳ ವಿಸ್ತಾರಗಳನ್ನು ಕಾಣುವುದಕ್ಕೆ ಪಾರಮಾರ್ಥ ಚಿಂತನೆಯೇ ಪ್ರೇರಣೆ ಎನ್ನಬಹುದು. ಯಾಕೆಂದರೆ ಇವರ ಕಲಾಜೀವನದ ಹೆಚ್ಚಿನ ಕಾರ್ಯಕ್ಷೇತ್ರವು ಧಾರ್ಮಿಕ ಹಿನ್ನೆಲೆಯಲ್ಲೆ ಪೋಷಿಸಲ್ಪಟ್ಟಿತು ಇಲ್ಲವೇ ಪ್ರಕಾಶಿಸಲ್ಪಟ್ಟಿತು ಎನ್ನುವುದು ನಿಜಾಂಶವೇ ಆಗಿದೆ.

ನಮ್ಮಲ್ಲಿ ಸಾಕಷ್ಟು ವಿರಕ್ತರಿದ್ದು, ಅವರಲ್ಲಿ ಹಲವರು ಕಾವಿಬಟ್ಟೆಯನ್ನು ತೊಟ್ಟು ಸನ್ಯಾಸಿಯಾದವರಿದ್ದಾರೆ. ಅದಿರಲಿ, ಹಾಗೆಯೇ ಸಾಕಷ್ಟು ಕಲಾವಿದರೂ ಇದ್ದಾರೆ. ವಿರಕ್ತ ಭಾವ ಮತ್ತು ಚಿತ್ರಕಲೆಯನ್ನು ಒಟ್ಟೊಟ್ಟಿಗೆ ಜೀವನದ ಅವಿಭಾಜ್ಯ ಅಯ್ಕೆಯಾಗಿ ಅಳವಡಿಸಿಕೊಂಡವರು ಅತ್ಯಂತ ವಿರಳ. ಮೇಲ್ನೋಟಕ್ಕೆ ತೀರಾ ಲೌಕಿಕ ಎನ್ನುವ ಚಿತ್ರಕಲೆಗೆ ವಿರಕ್ತಿ ಎಂಬುದು ಹಲವು ಸಂದರ್ಭದಲ್ಲಿ ಒಗ್ಗುವುದಿಲ್ಲ. ಕಲೆ ಎಂಬುದು ಒಂದು ವಿಧದಲ್ಲಿ ರಸಿಕ ಪ್ರಪಂಚಕ್ಕೆ ಸೇರಿದ್ದು. ವಿಶೇಷವಾಗಿ ಚಿತ್ರ ಕಲಾವಿದರು ಪ್ರೇಮ, ಕಾಮ, ಭೀಭತ್ಸ್ಯಗಳನ್ನು ಚಿತ್ರಿಸಿ ಖ್ಯಾತಿಪಡೆದವರೇ ಹೆಚ್ಚು. ಸಾಮಾನ್ಯ ಮನಸ್ಸುಗಳನ್ನು ಸ್ಪಂದಿಸಲು ಇದು ಅವಶ್ಯವೂ ಆಗಿರುತ್ತದೆ.

ಕಾರಂತರ ಬಗ್ಗೆ ಇನ್ನಷ್ಟು ಸೂಕ್ಷ್ಮವಾಗಿ ನೋಡಿದರೆ, ಅವರಿಗೆ ಲೌಕಿಕ ಮತ್ತು ಪಾರಮಾರ್ಥಿಕ ಜಗತ್ತುಗಳು ಒಂದಕ್ಕೊಂದು ವಿರುದ್ಧವಾಗಿ ಇದ್ದಂತೆ ಕಾಣುವುದಿಲ್ಲ. ಆಧ್ಯಾತ್ಮಿಕತೆ ಅವರಿಗೆ ಒಂದು ಆಶ್ರಯ, ನೋವು ಮರೆಯುವ ಸಾಧನ. ಅಷ್ಟೇ ಅಲ್ಲ. ಶ್ರೀ ಕೃಷ್ಣನ 'ರಾಸ ಲೀಲಾ'ಕ್ಕೆ ಪಾರಮಾರ್ಥಿಕ ಚಿಂತಕರಲ್ಲಿ ಅದ್ಭುತವಾದ ಅರ್ಥವಿವರಣೆ ಇದೆ. ಇಲ್ಲಿ ಆಧ್ಯಾತ್ಮ ಯಾವುದು, ಲೌಕಿಕ ಸುಖ ಯಾವುದು? ಮೀರಾಬಾಯಿ ಕೃಷ್ಣ ಪರಮಾತ್ಮನನ್ನು ಪ್ರೇಮಿಸುವುದು, ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಹೇಳಿಕೊಳ್ಳಲಿಲ್ಲವೆ. ಇಲ್ಲಿ ಉಭಯ ಜಗತ್ತುಗಳು ಒಂದಕ್ಕೊಂದು ಸೇರಿಕೊಂಡಿವೆ. ಇವರುಗಳು ಸೃಷ್ಟಿಸಿದ ಭಕ್ತಿ ಸಾಹಿತ್ಯವು ಒಟ್ಟಾರೆ ಸಾಹಿತ್ಯದ ದೃಷ್ಟಿಯಲ್ಲೂ ಉನ್ನತ ಸ್ಥಾನಮಾನ ಪಡೆದಿವೆ. ಇದೇ ವಿವರಣೆಗಳು ಕಾರಂತರ ಬಗ್ಗೆ ಇವರು ಹೀಗಿರಬಹುದು ಎಂದು ನಿರ್ಧರಿಸಲು ಒಂದು ತಳಹದಿ ಎಂದರೆ ತಪ್ಪಿಲ್ಲ. ರಾಜ್ಯದ ಹಿರಿಯ ಕಲಾವಿದರಲ್ಲೊಬ್ಬರಾಗಿ ಕಳೆದ ವರ್ಷ ಅಕಾಡೆಮಿಯ ಗೌರವ ಪ್ರಶಸ್ತಿಗೆ ಪಾತ್ರರಾದ ಪಣಂಬೂರು ಪುರುಷೋತ್ತಮ ಕಾರಂತರಿಗೂ ಅಸ್ಪಷ್ಟವಾಗಿ ಇವರುಗಳ ಹೋಲಿಕೆ.



ಮೆಲೋಡಿ / Melody

ಜೀವನದ ಆಯ್ಕೆಯಲ್ಲಿ ನಿವೃತ್ತಿ ಮಾರ್ಗ ತುಳಿದ ಪಣಂಬೂರು ಪುರುಷೋತ್ತಮ ಕಾರಂತರು ರಾಮಕೃಷ್ಣ ಮಿಷನ್‌ದಲ್ಲಿ ತಮ್ಮ ಹೆಚ್ಚಿನ ಸಮಯವನ್ನು ಗುರುತಿಸಿಕೊಂಡಿದ್ದಾರೆ. ಅವರಲ್ಲಿರುವ ಕಲಾವಿದನನ್ನು ಮಿಷನ್‌ದವರೂ ಗುರುತಿಸಿ ಕೆಲವು ಕೇಂದ್ರಗಳಲ್ಲಿ ಇವರ ಕಲಾಕೃತಿಗಳ ಖಾಯಂ ಗ್ಯಾಲರಿಯನ್ನು ನಿರ್ಮಿಸಿ ಚಿತ್ರಕಲೆಯ ಆರಾಧನೆಗೂ 'ಅವಕಾಶ' ನಿರ್ಮಿಸಿಕೊಟ್ಟಿದ್ದಾರೆ. ಕ್ರಿಶ್ಚಿಯನ್ ಮಿಷನರಿಗಳು ಚರ್ಚ್‌ಗಳ ಮೂಲಕ ಕಲೆ ಮತ್ತು ಕಲಾವಿದರ ಪೋಷಣೆಯಲ್ಲಿ ಅದ್ಭುತ ಕೆಲಸವನ್ನು ಮಾಡಿದ್ದನ್ನು ಸ್ಮರಿಸಬೇಕು. ಕಾರಂತರ ಚಿತ್ರಗಳ ಗ್ಯಾಲರಿಯನ್ನು ಹಾಕಿಸುವ ಮೂಲಕ ರಾಮಕೃಷ್ಣ ಮಿಷನ್ ಕೂಡ ಇಂಥದ್ದೇ ಒಂದು ಒಳ್ಳೆ ಕೆಲಸವನ್ನು ಮಾಡಿದೆ ಎಂದು ಶ್ಲಾಘಿಸಬೇಕು.

ಮತ್ತೆ ಇವರ ವಿರಕ್ತಿಯ ಬಗ್ಗೆ ಚರ್ಚೆಗೆ ಇಳಿದರೆ.. ಹತ್ತು ಹಲವು ವರ್ಷಗಳಿಂದ ಇವರ ಬಿಳಿ ಬಟ್ಟೆ ಇವರ ವಿರಕ್ತಿಗೆ ಒಂದು ಬಹಿರಂಗ ಗುರುತು. ಮಹಾಲಸಾ ಕಲಾಶಾಲೆಯ ಪ್ರಾಂಶುಪಾಲರಾದ ಮೇಲೆ ತಾವು ಮುಂದೆಂದೂ ಪ್ಯಾಂಟ್ ಹಾಕಿಲ್ಲ ಎಂಬುದನ್ನು ಅವರು ಹಿಂದೆಲ್ಲೊ ಸ್ಮರಿಸಿದ ನೆನಪು. ಬಿಳಿ ಅಂಗಿ, ಲುಂಗಿ ರೀತಿಯಲ್ಲಿ ಕಟ್ಟಿದ ತೆಳು ಪಂಚೆಯಲ್ಲಿ, ಗಾಳಿಯಲ್ಲಿ ತೇಲಿ ಬರುವ ಮಲ್ಲಿಗೆಯ ಹೂವಿನಂತೆ ಪುಟ್ಟ ಕಾರಂತರನ್ನು ಗುರುತಿಸಬಹುದು. ನಾಲ್ಕೂವರೆ ಅಡಿಯ ಈ ವಾಮನ ಮೂರ್ತಿಯ ಕೂದಲುಗಳು ಇತ್ತೀಚೆಗೆ ಬೆಳ್ಳಿ ಬಣ್ಣಕ್ಕೆ ತಿರುಗಿದ್ದರೂ ಗುರುತಿನಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಅವರ ತೀಕ್ಷ್ಣವಾದ-ಸುಂದರ ಕಣ್ಣು, ಇತ್ತೀಚೆಗೆ ಒಂದು ಶಸ್ತ್ರ ಚಿಕಿತ್ಸೆಗೊಳಗಾಗಿದ್ದರೂ ಬಣ್ಣಗಳ ಕನಸು ಕಾಣುವುದಕ್ಕೆ ಯಾವ ಅಡಚಣೆಯೂ ಆಗಿಲ್ಲ. ಅಂದಹಾಗೆ 'ಬಿಳಿ' ವಿರಕ್ತಿಯ ಸಂಕೇತವಷ್ಟೆ!!

ಮಂಗಳೂರಿನ ಕೋಡಿಕಲ್‌ನ ವಿವೇಕಾನಂದ ನಗರದಲ್ಲಿ ಎರಡು ಸೆಂಟ್ ಭೂಮಿಯೇ ಇವರ ರಂಗಭೂಮಿ. ಎರಡು ಕೊಠಡಿಗಳ ಕುಟೀರದ ರೀತಿಯ ಒಂದು ಮನೆ ನಿರ್ಮಿಸಿಕೊಂಡು ಸರಳವಾಗಿ ಬದುಕುತ್ತಿದ್ದಾರೆ. 'ನನ್ನ ಬದುಕಿಗೆ ಇನ್ನೆಷ್ಟು ದೊಡ್ಡ ಮನೆ ಬೇಕು. ನಾನಿರುವವ ಒಬ್ಬ. ನನ್ನ ಅಮ್ಮ ಕೂಡ ಇದೇ ಮನೆಯಲ್ಲಿ ಹಲವು ವರ್ಷ ಬದುಕಿದ್ದರು." ಎಂಬ ಸ್ಪಷ್ಟ ವಿಚಾರವನ್ನು, ಒಳಗಿರುವ ಇವರಲ್ಲಿನ ವಿರಕ್ತ ಅಭಿಪ್ರಾಯಪಟ್ಟರೂ, ಹೊಸದಾಗಿ ಬರುವ ಸ್ನೇಹಿತರಿಗೆ ನನ್ನ ಮನೆಯನ್ನು ನೋಡಿ ಅನ್ಯಥಾ ಭಾವಿಸಬೇಡಿ ಎಂದು ಮುಜುಗರಪಟ್ಟುಕೊಂಡೇ ಇವರ ಸ್ವಾಗತ ಇರುತ್ತದೆ.

ಎರಡು ಕೊಠಡಿಯ ಮನೆಯ ಹೊರಗೆ ಕಾರಂತರೇ ದಿನವೂ ನೀರು ಹಾಕಿ ಸಲಹಿದ ಸಣ್ಣದೊಂದು ತೋಟವೂ ಇದೆ. ಅದರಲ್ಲಿ ಅವರ ಅತ್ಯಂತ ಪ್ರೀತಿಯ ಜಾಜಿ ಹಾಗೂ ಮಲ್ಲಿಗೆ ಬಳ್ಳಿಗಳು ಮನೆಯ ಮೇಲಿನ ತನಕ ಹಬ್ಬಿದ್ದು, ಇವುಗಳ ಪರಿಮಳದ ಹೂವನ್ನು ಕಿತ್ತು ದಿನವೂ ದೇವರಿಗೆ ಇಡುವುದರಲ್ಲಿ ಇವರಿಗೊಂದು ಸಂತಸ. " ಇತ್ತೀಚೆಗೆ ನಾನು ಎಲ್ಲರಂತೆ ಪೂಜೆ ಮಾಡುವುದಿಲ್ಲ. ಬೆಳಿಗ್ಗೆ ಒಂದಿಷ್ಟು ಹೊತ್ತು ಕುಳಿತು ಧ್ಯಾನ ಮಾಡುತ್ತೇನೆ. ಅದೂ ಕೂಡ ಯಾವುದೇ ಶಾಸ್ತ್ರೋಕ್ತ ರೀತಿ ಅಲ್ಲ. ಅಷ್ಟಾದರೂ ದಿನವಿಡೀ ಪರಿಮಳ ಬೀರುವ ಈ ಹೂವು ನನಗೆ ಖುಷಿಕೊಡುತ್ತವೆ" ಎಂದವರು ಹೇಳುತ್ತಾರೆ.

ಅವರ ಮನೆಯಲ್ಲಿ ಪೇರಿಸಿಡಲಾಗಿರುವ ಪೇಂಟಿಂಗ್‌ಗಳ ಬಗ್ಗೆ ಒಂದಿಷ್ಟು ಗಮನ ಹರಿಸಿದರೆ ಅವರ ಕಲಾಪ್ರಪಂಚಕ್ಕೆ ಇಳಿಯಬಹುದು. ಅಲ್ಲಿರುವ ರಾಮಕೃಷ್ಣ ಪರಮಹಂಸರ ಚಿತ್ರ ಅತ್ಯಂತ ಕಲಾಪೂರ್ಣವಾಗಿ, ಕಲಾವಿದರನ್ನು ಆಕರ್ಷಿಸುತ್ತದೆ. ಕಲೆಯ ಅನುಭಾವ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಸಿಕ್ಕ ಜಾಗದಲ್ಲಿ ಇರುವುದೆಲ್ಲ ಚಿತ್ರಕಲೆಯ

ಸುರುಳಿಗಳಿ. ಒಂದೊಂದರದ್ದು ಒಂದೊಂದು ಪ್ರಪಂಚ. ಅಷ್ಟೊಂದು ವ್ಯವಸ್ಥಿತ ರೀತಿಯಲ್ಲಿ ಇಡದ ಕಾರಣ ಒಂದಿಷ್ಟು ಹಾಳಾಗುತ್ತಲೂ ಇವೆ. ಬಿಡಿಸಿದ ಚಿತ್ರಗಳ ಬಗ್ಗೆ ಕಾರಂತರಿಗೆ ಯಾವ ರೀತಿಯ ವ್ಯಾಮೋಹವೂ (ಅಟಾಚ್‌ಮೆಂಟ್) ಇಲ್ಲ.

ಪುರುಷೋತ್ತಮ ಕಾರಂತರಲ್ಲಿ ಕಲಾವಿದ ಮೂರು ಹಂತದಲ್ಲಿ ಬೆಳವಣಿಗೆಗೊಂಡು, ಕೊನೆಗೆ ರಾಮಕೃಷ್ಣ ಮಠದಲ್ಲಿ ಅವರ ಗ್ಯಾಲರಿಗಳ ಸ್ಥಾಪನೆಯೊಂದಿಗೆ ಹೊರಗಿರುವ ವಿರಕ್ತನೊಟ್ಟಿಗೆ ಬೆರೆತಿದ್ದಾನೆ.

ಬಾಲ್ಯದಲ್ಲಿಯೇ ಆಕರ್ಷಣೆ

ಪುರುಷೋತ್ತಮ ಕಾರಂತರು ೨೬.೨.೧೯೪೦ರಲ್ಲಿ ಇದೀಗ ನವಮಂಗಳೂರು ಬಂದರು ಪ್ರದೇಶ ಆವರಿಸಿಕೊಂಡಿರುವ ಪಣಂಬೂರು ಪ್ರದೇಶದಲ್ಲಿ ಜನಿಸಿದರು. ವೃತ್ತಿಯಲ್ಲಿ ಬಹುಕಾಲ ಇಲ್ಲಿನ ಜನತಾ ಬಜಾರ್‌ನಲ್ಲಿ ಕ್ಲರ್ಕ್ ಆಗಿದ್ದ ತಂದೆ ವಾಸುದೇವ ಕಾರಂತ, ತಾಯಿ ಸಾವಿತ್ರಿ ಅವರುಗಳ ಎಂಟನೆಯ ಕುಡಿಯಾಗಿ ಹುಟ್ಟಿದವರು. ಒಟ್ಟು ಕುಟುಂಬದಲ್ಲಿ ಹುಟ್ಟಿದ ಮಕ್ಕಳಲ್ಲಿ ಇರುವ ಸೌಜನ್ಯ, ಪಾಲಿಗೆ ಬಂದಿದ್ದು ಪಂಚಾಮೃತ ಎಂಬ ಹೊಂದಾಣಿಕೆಯ ಗುಣವನ್ನು ಅವರ ಜೀವನದುದ್ದಕ್ಕೂ ಗಮನಿಸಬಹುದು. ತಂದೆ ತಾಯಿಯರೇ ಕಷ್ಟದಲ್ಲಿದ್ದಾಗ ಮಕ್ಕಳ ಬೇಕುಗಳನ್ನು ಹೆಚ್ಚಾಗಿ ಕೇಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಕಾರಣವೋ ಏನೋ ಕಾರಂತರು ಚಿಕ್ಕಂದಿನಿಂದಲೇ ಅಂತರ್ಮುಖಿಯಾಗಿದ್ದರು ಎಂಬುದನ್ನು ಅವರನ್ನು ಆಗಿನಿಂದಲೇ ಬಲ್ಲವರು ಹೇಳುತ್ತಾರೆ.

ಈಗಲೂ ಕೂಡ ಯಾರಾದರೂ ಅನ್ಯಾಯ ಮಾಡಿದರೆ ಅವರು ಪ್ರತಿಭಟಿಸುವುದಿಲ್ಲ, ನುಂಗಿಕೊಳ್ಳುತ್ತಾರೆ. ಆ ನೋವುಗಳು ಅವರಲ್ಲಿ ಬಣ್ಣದ ಚಿತ್ರವಾಗಿ ಹೊಮ್ಮಿತೇ ಎಂಬ ಪ್ರಶ್ನೆಯೂ ಇದೆ. ತಂದೆಯೊಬ್ಬರ ಸಂಬಳದಿಂದ ಎಲ್ಲಾ ನಡೆಯಬೇಕಾಗಿದ್ದರಿಂದ ಇಷ್ಟೊಂದು ಮಕ್ಕಳಿಗೆ ಉನ್ನತ ವ್ಯಾಸಂಗಕ್ಕೆ ಕಳುಹಿಸುವುದು ಕಷ್ಟವಾಗಿತ್ತು. ಎಲ್ಲರಿಗೂ ಎಸ್ಸೆಸೆಲ್ಸಿಯ ತನಕ ಹೇಗೋ ಕಷ್ಟಪಟ್ಟು ಓದಿಸಿದ್ದರು ಎಂಬ ಮಾತನ್ನು ಕಾರಂತರು ವಿಶೇಷವಾಗಿ ಸ್ಮರಿಸುತ್ತಾರೆ. ಆ ನಂತರದ ಶಿಕ್ಷಣಕ್ಕೆ ಅವರು ನಡೆಸಬೇಕಾದ ಹೋರಾಟವೂ ಒಂದಿಷ್ಟು ಕುತೂಹಲಕರ ವೃತ್ತಾಂತವೇ.

ಆರಂಭಿಕವಾಗಿ ಅವರು ಮಂಗಳೂರಿನ ಮಣ್ಣಗುಡ್ಡ ಪ್ರಾಥಮಿಕ ಶಾಲೆಯಲ್ಲಿ, ನಂತರ ಇಲ್ಲಿನ ರಥಬೀದಿಯ ಸೆಂಟ್ರಲ್ ವಾರ್ಡ್ ಶಾಲೆಯಲ್ಲಿ ಓದಿದರು. ಐದನೆ ತರಗತಿಯವರೆಗೆ ಇಲ್ಲಿ ಓದಿದ ಕಾರಂತರಲ್ಲಿ ಇದೇ ಸಂದರ್ಭದಲ್ಲಿ ಚಿತ್ರ ರಚನೆಯ ತೀವ್ರತೆ ಹೊರಕ್ಕೆ ಬಂದಿದ್ದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಗೆಳೆಯನೊಬ್ಬನ ಬೇಡಿಕೆಯೂ ಕಾರಣವಾಗಿತ್ತು.

ಈಗಲೂ ಕಾರಂತರು ಆ ಘಟನೆಗಳನ್ನು ಸ್ಮರಿಸುತ್ತಾರೆ. "ಆ ಗೆಳೆಯನ ಹೆಸರು ನನಗೆ ಇದೀಗ ಜ್ಞಾಪಕಕ್ಕೆ ಬರುವುದಿಲ್ಲ. ನಾಲ್ಕೈದನೆ ತರಗತಿಯಲ್ಲಿಯೇ ಒಬ್ಬ ಗೆಳೆಯನ ಅನಿರೀಕ್ಷಿತ ಪ್ರೋತ್ಸಾಹ ನನಗೆ ಸಿಕ್ಕಿತ್ತು. ಆತ ನಿತ್ಯವೂ ಮಧ್ಯಾಹ್ನ ಊಟದ ವಿರಾಮದಲ್ಲಿ ದೊಡ್ಡ ದೊಡ್ಡ ಬಿಳಿಯ ಕಾಗದದ ಹಾಳೆಯನ್ನು ತಂದುಕೊಟ್ಟು ತನಗೆ ಲಕ್ಷ್ಮೀ, ಸರಸ್ವತಿ,

ರಾಮ, ಕೃಷ್ಣರ ಚಿತ್ರಗಳನ್ನು ಬಿಡಿಸಿ ಕೊಡುವಂತೆ ಒತ್ತಾಯಿಸುತ್ತಿದ್ದ. ನಾನು ಆ ಚಿತ್ರಗಳನ್ನು ಆಗಲೇ ಬಿಡಿಸುತ್ತಿರುತ್ತಿದ್ದೆ ಎಂಬ ವಿಚಾರವನ್ನು ಅವನು ಗಮನಿಸಿದ್ದಿರಬೇಕು. ಬೇಕಾದ ಪೆನ್ಸಿಲ್, ಬಣ್ಣಗಳನ್ನು ಆತ ಕೊಡುತ್ತಿದ್ದ. ಅವನಿಗೆ ಸಾಕಷ್ಟು ಚಿತ್ರಗಳನ್ನು ಬಿಡಿಸಿಕೊಟ್ಟ ಒಂದು ನೆನಪು ಕಾಣುತ್ತದೆ. ಆಗ ನಾನೆಷ್ಟು ಚೆಂದವಾಗಿ ಚಿತ್ರ ಬಿಡಿಸುತ್ತಿದ್ದಿರಬಹುದು, ಆತ ಅದನ್ನು ಕೊಂಡು ಹೋಗಿ ಏನು ಮಾಡಿದ ಎಂಬ ಯಾವುದೇ ವಿಷಯವೂ ಗೊತ್ತಿಲ್ಲ. ಇಷ್ಟಕ್ಕೂ ಆ ಹುಡುಗನ ನಿಜವಾದ ಮುಖಚರ್ಯೆ, ಹೆಸರು ಈಗ ಜ್ಞಾಪಕಕ್ಕೆ ಬರುವುದಿಲ್ಲ" ಎನ್ನುತ್ತಾರೆ ಇದೀಗ ಅರವತ್ತೈದರ ಪ್ರಾಯದಲ್ಲಿರುವ ಕಾರಂತರು. ಬಳಪದಿಂದ ಸ್ಲೇಟಿನಲ್ಲಿ ಚಿತ್ರ ಬಿಡಿಸುವುದು ಸಾಮಾನ್ಯವಾಗಿತ್ತೆಂದು ಸ್ಮರಿಸುತ್ತಾರೆ. ಸ್ನೇಹಿತ ಕೇಳಿದಾಗಲೆಲ್ಲ ಬಳಪದಲ್ಲೋ ಪೆನ್ಸಿಲ್‌ನಲ್ಲೋ ಚಿತ್ರ ಬಿಡಿಸುತ್ತಿದ್ದ ಕಾರಣ ತನ್ನ ಡ್ರಾಯಿಂಗ್‌ನಲ್ಲಿ ಹಿಡಿತ ಸಿಕ್ಕಿತೆಂಬುದನ್ನು ಅವರು ಸ್ಮರಿಸುತ್ತಾರೆ.

ಮುಂದೆ ಗಣಪತಿ ಹೈಸ್ಕೂಲಿನಲ್ಲಿ ಇವರ ಕಲಾ ಜೀವನ ಅಧಿಕೃತವಾಗಿ ಆರಂಭ ಆಯಿತು. ತಂದೆಯವರ ಆಪ್ತ ಗೆಳೆಯ ಖ್ಯಾತ ಚಿತ್ರಕಲಾವಿದರೂ ಆಗಿದ್ದು, ಆಗ ಎಲೋಷಿಯಸ್ ಹೈಸ್ಕೂಲಿನಲ್ಲಿ ಚಿತ್ರಕಲಾ ಅಧ್ಯಾಪಕ ಬಿ. ನರಸಿಂಹರಾವ್ ಅವರು ಇವರ ಮೇಲೆ ಗಾಢವಾದ ಪ್ರಭಾವ ಬೀರಿದ್ದಾರೆ. ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಕೆಲವೊಂದು ಆದರ್ಶಗಳನ್ನು ಕಾರಂತರು ಅವರಿಂದಲೇ ಪಡೆದಂತೆ ತೋರುತ್ತದೆ. ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣ ಮಾಡುವ ಆಸಕ್ತಿ, ಶಿಕ್ಷಕನಾಗಿ ಕಲಿಸುವ ಆಸೆ, ಕಲಾವಿದನಾಗುವ ಆಸೆ ನರಸಿಂಹರಾವ್ ಅವರಿಂದಲೇ ಎಲ್ಲೋ ಪ್ರೇರಣೆಯ ರೂಪದಲ್ಲಿ ಇವರಿಗೆ ಹರಿದು ಬಂದಿರಬಹುದೇನೊ.

"ಆದರೂ ಮನೆಯ ಹಿರಿಯರಿಂದ ನರಸಿಂಹರಾಯರಲ್ಲಿ ನೇರವಾಗಿ ಚಿತ್ರಕಲಾಭ್ಯಾಸ ಮಾಡುವ ಅವಕಾಶ ದೊರೆತಿದ್ದು ಅದರಲ್ಲೂ ಅವರ ಅಧ್ಯಾಪಕ ತರಬೇತಿ ಪಡೆಯುವ ಹಿರಿಯ ವಿದ್ಯಾರ್ಥಿಗಳೊಡನೆ ಕ್ರಮಬದ್ಧವಾಗಿ ಚಿತ್ರಕಲಾಭ್ಯಾಸದ ಸುಸಂದರ್ಭ ದೊರಕಿದ್ದು ನನ್ನ ಪಾಲಿಗೆ ಕಲಾಜೀವನದ ಹೆಬ್ಬಾಗಿಲು ತೆರೆದಂತೆ ಎನ್ನಬೇಕು. ಆ ಒಂದೆರಡು ವರ್ಷಗಳಲ್ಲಿ ಪ್ರಾಥಮಿಕ ಹಂತದ ಪರೀಕ್ಷೆಗಳನ್ನು ಪಾಸುಮಾಡಿದೆ." ಎಂದು ಹೇಳುವ ಕಾರಂತರು ಮುಂದೆ ಬೆಳ್ತಂಗಡಿಯಲ್ಲಿ ಚಿತ್ರಕಲಾ ಪ್ರಾಧ್ಯಾಪಕನಾದ ನಂತರವೂ ರಜೆಯ ವೇಳೆಯಲ್ಲಿ ಮಂಗಳೂರಿಗೆ ಬಂದಾಗ ನರಸಿಂಹರಾಯರಲ್ಲಿ ಹೋಗಿ ಚಿತ್ರಕಲಾ ಅಭ್ಯಾಸವನ್ನು ಮಾಡುತ್ತ ಸಂಪರ್ಕ ಇಟ್ಟುಕೊಂಡಿದ್ದರು.

ಆಗಿನ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಂತೆ ಗಣಪತಿ ಹೈಸ್ಕೂಲಿನಲ್ಲಿ ಕೊನೆಯ ಎರಡು ವರ್ಷಗಳಲ್ಲಿ ಅಧ್ಯಾಪಕ ತರಬೇತಿಯ ಕೆಲವು ಪಾಠಗಳನ್ನು ಐಚ್ಛಿಕವಾಗಿ ಓದುವ ಅನುಕೂಲತೆ ಇತ್ತು. ಆ ವಿಷಯ ಆಯ್ದುಕೊಂಡವರಿಗೆ ಮುಂದೆ ಶಿಕ್ಷಕರಾಗುವುದಕ್ಕೆ ಒಂದೇ ವರ್ಷದ ಶಿಕ್ಷಕ ತರಬೇತಿ ಸಾಕಾಗಿತ್ತು.

ಈ ಅವಕಾಶದಿಂದ ಎಸ್ಸೆಸ್ಸೆಲ್ಸಿ ಮುಗಿಸುವ ಹೊತ್ತಿಗೆ ಕಾರಂತರು ಐಚ್ಛಿಕ ವಿಷಯವಾಗಿ ಚಿತ್ರಕಲೆಯನ್ನು ಆಯ್ದು ಶಿಕ್ಷಕರಾಗುವುದಕ್ಕೆ ಸಂಪೂರ್ಣ ಸಿದ್ಧರಾಗಿದ್ದರು. ಬೇರೊಂದು ಸಂಸ್ಥೆಯ ಶಿಕ್ಷಕ ನರಸಿಂಹರಾವ್ ಅವರ ಬಗ್ಗೆ ಕುತೂಹಲ ಯಾಕಾಗಿದ್ದಿರಬಹುದು ಎಂದರೆ ಆಗಿನ ದಿನಗಳಲ್ಲಿ ಗಣಪತಿ ಹೈಸ್ಕೂಲಿನಲ್ಲಿ ನಿರಂತರವಾಗಿ ಕಲಾಶಿಕ್ಷಕರೊಬ್ಬರು ಇರುತ್ತಿರಲಿಲ್ಲ.



ಕಾಳಿಂಗ ಮರ್ಧನ / Kalinga Mardana

ಆಗಾಗ ಕೆಲವರು ಬಂದು ವೃತ್ತಿ ನಿಮಿತ್ತ ಹೊರಟು ಹೋಗುತ್ತಿದ್ದರು. ಅಷ್ಟಾದರೂ ವಾರ್ಷಿಕವಾಗಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಚಿತ್ರಕಲೆಗೆ ಇಲ್ಲಿ ಸಾಕಷ್ಟು ಅವಕಾಶಗಳಿದ್ದವು. ಇದರಲ್ಲೆಲ್ಲ ಕಾರಂತರು ಭಾಗವಹಿಸಿ ಗಮನ ಸೆಳೆಯುತ್ತಿದ್ದರು. ವಿಶೇಷವಾಗಿ ಆದರ್ಶ ವ್ಯಕ್ತಿಗಳಾದ ಸ್ವಾತಂತ್ರ್ಯ ಹೋರಾಟಗಾರರು, ಚಾರಿತ್ರಿಕ ವ್ಯಕ್ತಿಗಳ ವ್ಯಕ್ತಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಎಸ್ಸೆಸೆಲ್ಸಿ ಮುಗಿಸುವ ಹೊತ್ತಿಗೆ ಸಾಮಾನ್ಯ ಶಿಕ್ಷಕ ಹಾಗೂ ಕಲಾ ಶಿಕ್ಷಕನಾಗುವುದಕ್ಕೂ ಕಾರಂತರು ತಯಾರಾಗಿದ್ದರು. ಇಲ್ಲಿ ಮುಗಿಯುತ್ತಿದ್ದಂತೆ ಬೆಳ್ತಂಗಡಿ ಬೋರ್ಡ್ ಹೈಸ್ಕೂಲಿನಲ್ಲಿ ಅವರಿಗೆ ಶಿಕ್ಷಕನಾಗಿ ಕೆಲಸವು ಸಿಕ್ಕಿತು.

ಬೆಳ್ತಂಗಡಿಯಲ್ಲಿ ಸಿಕ್ಕ ಬಣ್ಣ

ಹದಿನೆಂಟನೆ ವಯಸ್ಸಿನಿಂದ ಇಪ್ಪತ್ತೆರಡರ ತನಕ ಸರಿಯಾಗಿ ನಾಲ್ಕು ವರ್ಷ ಕಾರಂತರು ತಾಲ್ಲೂಕು ಪ್ರದೇಶವಾದ ಬೆಳ್ತಂಗಡಿಯಲ್ಲಿ ವಾಸವಾಗಿದ್ದರು. ದೊಡ್ಡ ಊರಲ್ಲಿದ್ದವರು ಚಿಕ್ಕ ಊರುಗಳಿಗೆ ಬಂದರೆ ಅವರಿಗೆ ಸಮಯವೇ ಹೋಗುವುದಿಲ್ಲ. ಮನಸ್ಸೆಲ್ಲ ಖಾಲಿ ಖಾಲಿಯಾಗಿರುತ್ತದೆ. ಆಗಿನ ಬೆಳ್ತಂಗಡಿಯ ಬಗ್ಗೆ ನೆನೆದುಕೊಳ್ಳುವ ಕಾರಂತರು ಇಂದಿನ

ಪ್ರಗತಿಗೆ ಹೋಲಿಸಿದರೆ ಬೆಳ್ತಂಗಡಿ ಅಂದು ಕಾಡು ಮೇಡುಗಳ ನಡುವಿನ ಕುಗ್ರಾಮ ಎನ್ನಬಹುದಾಗಿತ್ತು. ಮನಸ್ಸೆಲ್ಲ ಖಾಲಿಯಾಗಿದ್ದ ಆ ಸಮಯದಲ್ಲಿ ಕಲಾವಿದನ ಹೃದಯಕ್ಕೆ ಆ ಮಲೆನಾಡಿನ ದೃಶ್ಯಗಳು, ಗುಡ್ಡ, ಕಣಿವೆ, ವಸಂತದಲ್ಲಿ ಬಣ್ಣ ಬಣ್ಣಕ್ಕೆ ತಿರುಗುವ ಹಸಿರು ಮರಗಳು ಬಹಳ ಮೆಚ್ಚುಗೆಯಾಗಿದ್ದವು ಎನ್ನಬೇಕು. ಇದೇ ಸಂದರ್ಭದಲ್ಲಿ ಪ್ರಚಲಿತ ಇದ್ದ ರೇಡಿಯೊ ಅವರ ಸಾತಿಯಾಗಿತ್ತಲ್ಲದೆ, ಸಿತಾರ್ ಇಂದಿಗೂ ಅವರ ಮೆಚ್ಚಿನ ವಾದ್ಯ.

"ಅಲ್ಲಿನ ಶಾಂತ ವಾತಾವರಣ, ನಿಸರ್ಗದ ದಟ್ಟ ಹಸಿರು ಮತ್ತು ಪಶ್ಚಿಮ ಘಟ್ಟದ ದೃಶ್ಯಗಳು ಚಿತ್ರಕಲೆಯೊಂದಿಗೆ ಕನ್ನಡ ಸಾಹಿತ್ಯ ಅಭ್ಯಾಸಕ್ಕೂ ಪ್ರೇರಣೆ ಕೊಟ್ಟಿತ್ತು." ಎನ್ನುವ ಕಾರಂತರು ಇದೇ ಸಂದರ್ಭದಲ್ಲಿ ಸಾಕಷ್ಟು ಚಿತ್ರಗಳನ್ನು ಬಿಡಿಸಿದ್ದಲ್ಲದೆ ಬರವಣಿಗೆಗೂ ತೊಡಗಿದರು.

ಹಿಂದೆ ಅವರಲ್ಲಿ ಬರೆ ಚಿತ್ರಗಾರಿಕೆ ಅಥವಾ ಬಣ್ಣಗಾರಿಕೆಯ ಚಾತುರ್ಯ ಇದ್ದರೂ ಇಲ್ಲಿ ಈಗ ಅವರಿಗೆ ನಿಸರ್ಗದ ಅವರ್ಣನೀಯವಾದ ಸೌಂದರ್ಯಾನುಭೂತಿ, ಅಗಾಧತೆಯ ಸ್ಪಂದನ ಲಭಿಸಿತ್ತೆನ್ನಬೇಕು. ಕಲಾವಿದನ ಹೃದಯ ಆ ನಿಸರ್ಗದ ಮಡಿಲಲ್ಲಿ ಸಂಪನ್ನವಾಗತೊಡಗಿತು. ಕಲಾವಲಯದಲ್ಲಿ ತನ್ಮಯವಾಗಿ ತೃಪ್ತಿಕಾಣತೊಡಗಿತು. ಇನ್ನೊಂದೆಡೆ ನಿಸರ್ಗದ ಸೌಂದರ್ಯದ ಮೌನವಾದ ಮಡಿಲಲ್ಲಿ ಅರ್ಥವಾಗದಿದ್ದರೂ ಸಂಗೀತದ ಬಣ್ಣ ಮೂಡತೊಡಗಿದ್ದವು. ಸಿತಾರ್, ಕೊಳಲು ವಾದನಗಳಲ್ಲಿ ಸ್ವರಮೇಳದಲ್ಲಿ ಮನಸ್ಸು ಕರಗಿ ಬಣ್ಣಗಳಾಗಿ ಮಾರ್ಪಡುತ್ತಿತ್ತು. ಅವು ಕಲಾಕೃತಿಗಳಾಗಿ ಮೂಡಿಬರುತ್ತಿತ್ತು.

ಚಿತ್ರಕಲೆಯಲ್ಲಿ ತಾನೂ ಒಂದಿಷ್ಟು ಕಲಿಯುತ್ತ ಬೆಳ್ತಂಗಡಿಯ ಪ್ರಕೃತಿಯನ್ನು ಕಾರಂತರು ತೀವ್ರವಾಗಿ ನೋಡಿದರು. ತಮ್ಮ ಜೀವನದಲ್ಲಿ ಪ್ರಕೃತಿಯ ಗೆರೆ ಮತ್ತು ಬಣ್ಣ ವೈವಿಧ್ಯಗಳ ಅಚ್ಚನ್ನು ಒತ್ತಿಕೊಂಡು ಕಾರಂತರು ಅದನ್ನು ಜೀವಮಾನದುದ್ದಕ್ಕೂ ಬೇಕಾದಾಗ ಬಳಸಿಕೊಳ್ಳುತ್ತ ಬಂದಿದ್ದಾರೆ. ಹಾಗೆಂದು ಸಾಮಾನ್ಯವಾದ ಲ್ಯಾಂಡ್ ಸ್ಕೇಪನ್ನು ಕಾರಂತರು ಹೆಚ್ಚಾಗಿ ಬಿಡಿಸಿಲ್ಲ.

ಎಳವೆಯಿಂದಲೇ ಅವರು ರಾಮಕೃಷ್ಣ ಪರಮಹಂಸರ ಬಗ್ಗೆ ತುಂಬ ಆಕರ್ಷಿತರಾಗಿದ್ದರು ಎಂಬುದಕ್ಕೆ ಅವರು ಬೆಳ್ತಂಗಡಿಯಲ್ಲಿದ್ದಾಗಲೇ ಬರೆದು ಪ್ರಕಟಿಸಿದ 'ಗುರುಶಿಷ್ಯ' ಎಂಬ ಪುಸ್ತಕ ಸಾಕ್ಷಿಯಾಗುತ್ತದೆ. ಆಗಾಗ ಕಾರಂತರು ಹೇಳುವಂತೆ "ನನಗೆ ಪರಮಹಂಸರೇ ಇಷ್ಟವಾಗುತ್ತಾರೆ. ತುಂಬಾ ಸೌಮ್ಯವಾದ ಪ್ರತಿಪಾದನೆ ಅವರದ್ದು. ಯಾವೊಂದನ್ನು ಗಟ್ಟಿಯಾಗಿ ಹೇಳಿ ಇನ್ನೊಂದಕ್ಕೆ ಎಲ್ಲೆಲ್ಲೂ ಅವರು ಅಪಚಾರ ಎಸಗುವುದಿಲ್ಲ."

ಇಲ್ಲಿದ್ದಾಗಲೇ ರಾಮಕೃಷ್ಣ ಹಾಗೂ ವಿವೇಕಾನಂದರ ಜೀವನಗಳ ಒಂದಿಷ್ಟು ಆಳ ಅಧ್ಯಯನವನ್ನು ಕಾರಂತರು ಮಾಡಿದರು. ಸಣ್ಣ ಪುಟ್ಟ ಬರಹ, ಕತೆಗಳನ್ನು ಬರೆಯುತ್ತಲೂ ಇದ್ದರು. ಬೋರ್ಡ್ ಹೈಸ್ಕೂಲ್‌ನ ಅಧ್ಯಾಪಕರೆಲ್ಲ ಸೇರಿ 'ಕಾಜಾಣ ಸಾಹಿತ್ಯ ಪ್ರಕಾಶನ' ಆರಂಭಿಸಿದ್ದನ್ನು ಕಾರಂತರು ಸ್ಮರಿಸುತ್ತಾರೆ. ಇಲ್ಲಿಂದಲೇ ಕಾರಂತರು ಲೇಖಕರೂ ಆದರು. ಅವರಲ್ಲಿನ ಚಿತ್ರ ಕಲಾವಿದ ಪ್ರಜ್ವಲಿಸಿದಷ್ಟು ಲೇಖಕ ಬೆಳಕಿಗೆ ಬರಲಿಲ್ಲ. ಆದರೆ ಚಿತ್ರಕಲೆಗೆ ಪ್ರೇಕ್ಷಕರು ಇಲ್ಲ ಎಂದಾದಾಗಲೆಲ್ಲ ಅವರು ಬರಹದಲ್ಲಿ ತಮ್ಮ ಅಭಿವ್ಯಕ್ತಿ ಮಾಡುತ್ತ ಬಂದಿದ್ದಾರೆ.

ಬೆಳ್ತಂಗಡಿಯಲ್ಲಿ ಇದ್ದಾಗ ಅವರ ಮನಸ್ಸು ತೀರಾ ಅತೃಪ್ತವಾಗಿತ್ತು ಎಂಬುದು ಸ್ಪಷ್ಟ. ಚಿತ್ರಕಲೆಯಲ್ಲಿ ತಾನು ಕಲಿತಿದ್ದು ಏನೂ ಸಾಲದು ಎಂಬುದು ಅವರ ಅತೃಪ್ತಿಗೆ ಕಾರಣ. ಅವರ ನಿರಂತರ ಅಸಮಾಧಾನ ಹೊಸ ದಾರಿಗಳ ಬಗ್ಗೆ ಅನ್ವೇಷಣೆ ಮಾಡುತ್ತಿತ್ತು. ಉನ್ನತ ವ್ಯಾಸಂಗಕ್ಕೆ ನಿರಂತರವಾಗಿ ತುಡಿಯುತ್ತಿತ್ತು. ಆದರೆ ಅವರ ಒಟ್ಟೂ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಿತ್ತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಮನೆಯವರನ್ನು ಕೇಳುವ ಪರಿಸ್ಥಿತಿ ಇದ್ದಿರಲಿಲ್ಲ. ಅಷ್ಟಾದರೂ ಮೈಸೂರಿನ ಕಲಾಶಾಲೆಗಳ ವಿಷಯಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ಕಲೆಹಾಕುತ್ತಿದ್ದರು.

ಒಡೆಯರ್ ಆಳ್ವಿಕೆಯ ಕಾರಣದಿಂದ ಕರ್ನಾಟಕದಲ್ಲಿ ಚಿತ್ರಕಲೆ ಎಂದರೆ ಮೈಸೂರಿನಲ್ಲಿ ನೋಡಬೇಕು ಎಂಬ ನಂಬಿಕೆ ಆಗ ಇತ್ತು. "ಮೈಸೂರಿನ ಕಲಾಶಾಲೆಗಳ ಬಗ್ಗೆ ಕೇಳಿದಾಗಲೆಲ್ಲ ನನ್ನ ಮನಸ್ಸು ಹೊಯ್ದಾಡುತ್ತಿತ್ತು" ಎಂದು ಹೇಳುತ್ತಾರೆ.

ಆದರೆ ಬೆಳ್ತಂಗಡಿ ಬ್ಲಾಕ್ ಡೆವಲಪ್ ಮೆಂಟ್ ಅಧಿಕಾರಿ ಸುಶರ್ಮ ಭಟ್ ಅವರು ಕಾರಂತರಿಗೆ "ನೀವು ಮುಂಬಯಿನ ಜೆ.ಜೆ. ಸ್ಕೂಲಿಗೆ ಹೋಗಿ ಚಿತ್ರಕಲೆಯಲ್ಲಿ ಉನ್ನತ ವ್ಯಾಸಂಗ ಮಾಡಬಾರದೇಕೆ.... ಅಲ್ಲಿ ಕಲಿಯುವವರಿಗೆ ಸರ್ಕಾರದ ವಿದ್ಯಾರ್ಥಿ ವೇತನವೂ ಸಿಗುತ್ತದೆ" ಎಂಬ ಸಲಹೆ ನೀಡಿದ್ದರು. ಅದರಂತೆ ಕಾರಂತರು ಪರಿಚಿತರ ನೆರವಿನಿಂದ ರಾಮದೇವ್ ಹೋಟೆಲಿನ ಮಾಲೀಕ ಮುಂಬಯಿಯ ಕೆ.ಎನ್. ರಾವ್ ಅವರಲ್ಲಿ ಉಳಿಯುವ ವ್ಯವಸ್ಥೆಯನ್ನು ಮಾಡಿಕೊಂಡರು.

ಮುಂಬಯಿನಲ್ಲಿ ಕಳೆದ ದಿನಗಳು

ಕಾರಂತರು ೧೯೬೨ರಲ್ಲಿ ಮುಂಬಯಿನ ಜೆ.ಜೆ. ಸ್ಕೂಲಿಗೆ ಸೇರಿಕೊಂಡಿದ್ದು. ನಾಲ್ಕು ವರ್ಷಗಳ ಕಾಲ ಚಿತ್ರಕಲಾ ಶಿಕ್ಷಕರಾಗಿ ಇವರಿಗೆ ಇದಕ್ಕೂ ಮೊದಲು ಅನುಭವವಿದ್ದ ಹಿನ್ನೆಲೆಯಲ್ಲಿ ಅಲ್ಲಿನ ಕಲಿಕೆಯಲ್ಲಿ ಮೊದಲ ವರ್ಷದ ಪರೀಕ್ಷೆಯ ವಿನಾಯ್ತಿ ಸಿಕ್ಕಿತ್ತು. ಆದ್ದರಿಂದ ನೇರವಾಗಿ ಎರಡನೆ ವರ್ಷದ ಪರೀಕ್ಷೆಗೆ ಅಣಿಯಾದರು. ಹೀಗೆ ಅವರ ಮುಂಬಯಿ ಜೀವನ ಆರಂಭವಾಗುತ್ತದೆ. ಇದೀಗ ಕರ್ನಾಟಕದಲ್ಲಿ ಸಾಕಷ್ಟು ಹೆಸರು ಮಾಡಿರುವ ಹಾಲಿ ಅಕಾಡೆಮಿ ಅಧ್ಯಕ್ಷ ಪೀಟರ್ ಲೂಯಿಸ್, ಜಮಖಂಡಿಯ ವಿಜಯಾ ಸಿಂಧೂರ್, ಉಡುಪಿಯ ಜೆ.ಎಸ್. ಶೆಟ್ಟಿ ಅವರುಗಳು ಕಾಲೇಜಿನಲ್ಲಿ ಇವರ ಸಹಪಾಠಿಗಳಾಗಿದ್ದರು. ಉಡುಪಿಯ ಕಲಾವಿದ ಕೆ. ಲಕ್ಷ್ಮಣ ಭಟ್ ಅವರು ಇವರಿಗೆ ಮುಂಬಯಿನಲ್ಲಿಯೇ ಗೆಳೆಯರಾಗಿದ್ದರು. ಇನ್ನೂ ದೇಶದ ಎಲ್ಲೆಡೆಯಿಂದ ಬಂದು ಇಲ್ಲಿ ಕಲಿಯುತ್ತಿದ್ದವರೆಲ್ಲ ಪರಿಚಿತರಾದರು.


ಅಲ್ಲಿ ಅವರಿಗೆ ಅಂತರಾಷ್ಟ್ರೀಯ ಮಟ್ಟದ ಚಿತ್ರಕಲಾವಿದರ ಭೇಟಿಗೆ ಅವಕಾಶವೂ ಆಗಿದ್ದಲ್ಲದೆ, ವಿರಾಮದ ವೇಳೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅಲ್ಲಿನ ಗ್ರಂಥಭಂಡಾರ ತುಂಬ ಸಹಕಾರಿ ಆಗಿತ್ತು. ಇದೇ ಸಂದರ್ಭದಲ್ಲಿ ತಮ್ಮ ಮೂಲಕ ಆಕರ್ಷಣೆಯಾದ ಪರಮಹಂಸರ ಪುಸ್ತಕಗಳನ್ನು ಓದುತ್ತಲೇ, ಚಿನ್ಮಯಾನಂದರ ಉಪನ್ಯಾಸಗಳಲ್ಲೂ ಇವರು ಭಾಗವಹಿಸುತ್ತಿದ್ದರು. ಅಲ್ಲಿನ ಅವರ ಗುರುಗಳ ಬಗ್ಗೆ ಕಾರಂತರು "ಜೆ.ಜೆ. ಕಲಾಶಾಲೆಯ ಅಧ್ಯಾಪಕ ವೃಂದದಲ್ಲಿ ಶ್ರೀ ಕದಂ ಅವರ ವ್ಯಕ್ತಿ ಚಿತ್ರಣದ ಸ್ಟ್ರೋಕ್, ಶ್ರೀ ಸಾಂಗ್ವೆಯವರ ವರ್ಣವಿನ್ಯಾಸ ಬಹಳ ಮೆಚ್ಚಿಗೆಯಾಗುತ್ತಿತ್ತು" ಎಂದು ಹೇಳುತ್ತಾರೆ.

ಕಾರಂತರ ವಿಶೇಷ ಎಂದರೆ ಅವರು ಕೊನೆಯ ವರ್ಷದ ತನಕವೂ ಪ್ರಥಮ ಶ್ರೇಣಿಯಲ್ಲಿಯೇ ತೇರ್ಗಡೆಯಾದ ವಿದ್ಯಾರ್ಥಿ. ಕಾರಣ ಮಹಾರಾಷ್ಟ್ರ ಸರ್ಕಾರ ಇವರಿಗೆ ಶಿಷ್ಯ ವೇತನವನ್ನು ಕೊಡುತ್ತ ಬಂದಿತ್ತು. ಈ ಫಲಿತಾಂಶವು ಸಹಜವಾಗಿಯೇ ಊರಿನಲ್ಲಿ ಹಾಗೂ ಮುಂಬಯಿನಲ್ಲಿ ಇವರಿಗೆ ಆಶ್ರಯ ನೀಡಿದವರಿಗೂ ಕಾರಂತರ ಬಗ್ಗೆ ಹೆಮ್ಮೆ. ಅಂತಿಮವಾಗಿ ವಿದ್ಯಾರ್ಥಿಗಳ ವಾರ್ಷಿಕ ಪ್ರದರ್ಶನದಲ್ಲಿ ಒಮ್ಮೆ ಕಂಚಿನ ಪದಕ, ಇನ್ನೊಮ್ಮೆ ಚಿನ್ನದ ಪದಕಗಳು ಲಭ್ಯವಾಗಿದ್ದು ಅವರ ಪ್ರತಿಭೆಗೆ ಮುಂಬಯಿನಲ್ಲಿ ಆಗಲೇ ಸಿಕ್ಕ ಮರ್ಯಾದೆ ಇದು.

ಮುಂಬಯಿನಲ್ಲಿ ಕಾರಂತರ ಖಾಸಗಿ ಜೀವನ ಒಂದಿಷ್ಟು ಕುತೂಹಲಕರವಾಗಿದೆ. ಕೆ.ಎನ್. ರಾವ್ ಅವರ ಗೆಸ್ಟ್‌ಹೌಸ್‌ನ ಕೊಠಡಿಯೊಂದರಲ್ಲಿ ಇವರಿಗೆ ಉಚಿತ ವಸತಿಗೆ ವ್ಯವಸ್ಥೆ ಮಾಡಲಾಗಿತ್ತಲ್ಲದೆ, ಬೆಳಿಗ್ಗೆ ಅವರ ಮನೆಯಲ್ಲಿಯೇ ತಿಂಡಿಯ ವ್ಯವಸ್ಥೆ. ಆರಂಭದ ದಿನಗಳಲ್ಲಿ ಮಧ್ಯಾಹ್ನದ ಊಟವನ್ನು ಅವರ ರಾಮ್‌ದೇವ್ ಹೋಟೇಲಿನಲ್ಲಿ ಮಾಡುತ್ತಿದ್ದರು. ಸಂಜೆ ಮಾತ್ರ ಬೇರೆ ಕಡೆ ಊಟ ನಡೆಯುತ್ತಿತ್ತು. ಯಾವುದೇ ಜಾತಿಮತ ಎನ್ನದೆ ಆಗ ಮುಂಬಯಿಗೆ ಬರುತ್ತಿದ್ದ ಜಿಲ್ಲೆಯ ಹುಡುಗರಿಗೆ ಕೆಲಸವನ್ನು ಕೊಟ್ಟು, ಓದುವುದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದ ರಾವ್ ಅವರನ್ನು ಕಾರಂತರು ಈಗಲೂ ಕೃತಜ್ಞತೆಯಿಂದ ನೆನೆಯುತ್ತಾರೆ. ರಾಮಕೃಷ್ಣ ಮಠದಲ್ಲಿ ತೊಡಗಿಸಿಕೊಂಡಿರುವುದರಿಂದ ಕಾರಂತರಿಗೆ ಯಾವುದೇ ಜಾತಿಬೇಧ ಎಂಬುದಿಲ್ಲ.

ಮುಂಬಯಿಗೆ ಹೋದ ಕೆಲವು ತಿಂಗಳಲ್ಲೇ ಅವರು ತಮ್ಮ ಶಿಕ್ಷಕ ವೃತ್ತಿಯನ್ನು ರಾತ್ರಿ ಶಾಲೆಯಲ್ಲಿ ಮುಂದುವರಿಸಿದ್ದರು. ಅಲ್ಲಿನ ಪರೇಲ್ ಸ್ಕೂಲಿನಲ್ಲಿ ಕನ್ನಡವನ್ನು ಬೋಧನೆ ಮಾಡುತ್ತಿದ್ದರು. ಇದರಿಂದ ಒಂದಿಷ್ಟು ಆದಾಯ ಬರುತ್ತಿದ್ದರಿಂದ ಇವರ ಇತರ ಖರ್ಚಿಗಾಗಿ ಮನೆಯವರ ಕಡೆಗೆ ನೋಡಬೇಕಾಗಿರಲಿಲ್ಲ. ನಾಲ್ಕು ವರ್ಷಗಳಲ್ಲಿ ಮುಂಬಯಿ ಜೀವನಕ್ಕೆ ಕಾರಂತರು ಸಂಪೂರ್ಣ ಹೊಂದಿಕೊಂಡರೂ ನಂತರ ಅವರು ವಾಪಸ್ ಊರಿಗೆ ಬರಬೇಕಾಗಿ ಬಂದ ವಿಷಯ ಒಂದಿಷ್ಟು ಸಾಮಾಜಿಕ ಸ್ಥಿತ್ಯಂತರದ ಪ್ರಕ್ರಿಯೆಯೇ ಆಗಿದೆ. ಆಗಲೇ ಇಲ್ಲಿಂದ ಹೋದವರು ಮತ್ತು ಸ್ಥಳೀಯರು ಎಂಬ ನೆಲೆಯಲ್ಲಿ ಮುಂಬಯಿನಲ್ಲಿ ಘರ್ಷಣೆ ಆರಂಭವಾಗಿತ್ತು. ಇದೊಂದು ರಾಜಕೀಯ ವಿಚಾರವೂ ಆಗಿದ್ದರಿಂದ ಮಹಾರಾಷ್ಟ್ರ ಸರ್ಕಾರ ಹೊರಗಿನವರಿಗೆ ಕೆಲಸ ಇಲ್ಲ ಎಂಬುದಾಗಿ ಘೋಷಣೆ ಮಾಡಿತ್ತು. ಮುಂಬಯಿನಲ್ಲಿ ಆಗ ಈ ವಿಚಾರ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ ಕಾರಂತರಿಗೆ ಪರಿಚಿತರಿದ್ದ ಟೈಮ್ಸ್ ಆಫ್ ಇಂಡಿಯಾದಲ್ಲೂ 'ಹೊರಗಿನವರಿಗೆ ಇಲ್ಲಿ ಕೆಲಸ ಇಲ್ಲ' ಎಂಬುದಾಗಿ ಬರೆಯಲಾಗಿತ್ತು ಎಂಬುದನ್ನು ಕಾರಂತರು ಸ್ಮರಿಸುತ್ತಾರೆ. ಖಾಸಗಿ ಕಂಪೆನಿಯಲ್ಲಿಯೂ ಕರ್ನಾಟಕದವರಿಗೆ ಅಥವಾ ದಕ್ಷಿಣದವರಿಗೆ ಕೆಲಸ ಸಿಗುವುದು ಕಷ್ಟವಾಗಿತ್ತು. ಆಗಷ್ಟೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಶಿವಸೇನೆ ಕತ್ತಿಯನ್ನು ಝಳಪಿಸಿಯೇ ಒಳಗಿನವರು ಹೊರಗಿನವರು ಎಂಬುದಾಗಿ ಹೋರಾಟಕ್ಕೆ ಇಳಿದಿತ್ತು.

ಜೆ.ಜೆ.ಯಲ್ಲಿದ್ದಾಗಲೇ ಜಾಗತಿಕ ಕಲೆಯ ತುಡಿತ, ಸಮಕಾಲೀನ ಭಾರತೀಯ ಕಲೆಯ ತುಡಿತಗಳನ್ನೆಲ್ಲ ಮೈಗೂಡಿಸಿಕೊಂಡು ಕಾರಂತರು ಮಂಗಳೂರಿಗೆ ಹಿಂದಿರುಗಿದ್ದರು. ಆಗ ಇಲ್ಲಿ ಆರಂಭವಾಗಿದ್ದ ಕೇಂದ್ರೀಯ ವಿದ್ಯಾಲಯದಲ್ಲಿ ಅವರಿಗೆ ಕೆಲಸವೂ ಸಿಕ್ಕಿತಾದರೂ ಮನಸ್ಸು ವೇದನೆಗಳಿಂದ ಮುಕ್ತವಾಗಲಿಲ್ಲ.



ಆಟಿ ಕುಣಿತ / Aati Kunitha

ಅವಿವಾಹಿತನಾಗಿ ಇಡೀ ಜೀವನ

ಬ್ರಹ್ಮಚರ್ಯಕ್ಕೂ ಕಲೆಗೂ ಒಂದು ವಿಧವಾದ ನೆಂಟಿದೆ. ವೆಂಕಟಪ್ಪ ರುಮಾಲೆಯವರಿಂದ ಆರಂಭಿಸಿ ನಮ್ಮ ಅನೇಕ ಕಲಾವಿದರು ಬ್ರಹ್ಮಚಾರಿಗಳಾಗೇ ಉಳಿದರು. ಪ್ರಾಯಶಃ ಇವರಿಗೆ ಸಂಸಾರವೆಂಬುವುದು ಸಾಧನೆಗೆ ಅಡ್ಡಿ ತರುವಂತಹದು. ಏಕಾಗ್ರತೆ ತನ್ಮಯತೆಗಳಿಗೆ ಎರವಾಗುವಂತಹದು. ತಪೋನಿರತ ಋಷಿಗಳಂತೆ ಇವರೂ ಕಲಾತಪಸ್ವಿಗಳೆ. ಋಷಿಯಾಗದವನಿಗೆ ಕಾವ್ಯದಕ್ಕಲಾರದು ಎಂದು ಕಾವ್ಯ ಮೀಮಾಂಸೆ ಹೇಳುತ್ತದೆ. ಇವರಿಗೂ ಚಿತ್ರಕಲೆ ಒಂದು ತಪಸ್ಸು. ಆ ಮೂಲಕವೇ ಜೀವನ ಸಾಕ್ಷಾತ್ಕಾರ ಮಾಡಿಕೊಂಡವರು. ಪುರುಷೋತ್ತಮ ಕಾರಂತರೂ ಇದೇ ಮಾರ್ಗ ಆಯ್ಕೆ ಮಾಡಿಕೊಂಡರು. ಇದು ಅವರ ಕಲೆಗೆ ಮತ್ತು ಆಧ್ಯಾತ್ಮಕ್ಕೆ ಮೀಸಲಾಗಿ ಜೀವನವನ್ನು ಉಪಯೋಗಿಸುವ ಅವರ ಸದುದ್ದೇಶಕ್ಕೆ ಅನುಕೂಲವೇ ಆಯಿತೆನ್ನಬಹುದೆಂದು ಇವರ ಮುಂದಿನ ಕೆಲವು ಕಲಾಕೃತಿಯಲ್ಲಿ ಗುರುತಿಸಬಹುದು. ಎಲ್ಲ ಲಲಿತಕಲೆಗಳೂ (ಸಂಗೀತ, ಚಿತ್ರ, ಶಿಲ್ಪ, ಸಾಹಿತ್ಯ, ನೃತ್ಯ ಇತ್ಯಾದಿ...) ಭಾರತೀಯ ದೃಷ್ಟಿಕೋನದಲ್ಲಿ ಆಧ್ಯಾತ್ಮಿಕತೆಯ ಸ್ಪಂದನೆಯಲ್ಲಿಯೇ ಸಾರ್ಥಕತೆ ಹೊಂದುತ್ತವೆ ಎಂಬುದನ್ನು ಗಮನಿಸಿ, ಅವರ ಈ ಬಗೆಯ ಜೀವನದ ಅಂತರಂಗವೇನು ಎಂಬುದನ್ನು ಕಲ್ಪಿಸಿಕೊಳ್ಳಬೇಕು. ಅವರಲ್ಲಿ ಕಲೆಯ ಜೊತೆಗೆ ಬೆಳೆದು ಬಂದ ಸಾಹಿತ್ಯದ ಕೃತಿಗಳಲ್ಲೂ ಇದೇ ಆಶಯಗಳನ್ನು ಕಾಣಬಹುದು.

ಪ್ರಾಂಶುಪಾಲರಾಗಿ

ಕಾರಂತರ ಕಲಾ ಜೀವನದಲ್ಲಿ ಕೇವಲ ಒಂದು ಆಯ್ಕೆಯನ್ನು ಮಾತ್ರ ಮಾಡಿಕೊಳ್ಳಬೇಕಾಗಿ ಬಂದಿದ್ದನ್ನು ಅವರ ವೃತ್ತಿಯನ್ನು ಗಮನಿಸಿದರೆ ಸರಿಯಾಗಿ ಅರ್ಥೈಸಿಕೊಳ್ಳಬಹುದು. ಆರ್ಥಿಕ ಭದ್ರತೆ ಇದ್ದ ವೃತ್ತಿಯಲ್ಲಿ ಇವರಲ್ಲಿದ್ದ ಚಿತ್ರಕಲಾವಿದನಿಗೆ ತೃಪ್ತಿಯೇ ಇರಲಿಲ್ಲ. ಚಿತ್ರಕಲಾವಿದನಾಗಿ ಸಂಪೂರ್ಣ ತೃಪ್ತಿ ಇದ್ದ ವೃತ್ತಿಯಲ್ಲಿ ಸಂಬಳವನ್ನೇ ಸರಿಯಾಗಿ ಕೊಡಲಿಲ್ಲ. ಅಷ್ಟಾದರೂ ಎರಡನೆ ಆಯ್ಕೆಯಲ್ಲಿಯೇ ಬಹುಕಾಲ ಅವರು ಇದ್ದಿದ್ದು, ಕಾರಂತರಲ್ಲಿನ ಕಲಾ ಪ್ರೀತಿಯನ್ನು ಎತ್ತಿ ತೋರಿಸುತ್ತದೆ.

ಆಗ ಮುಂಬಯಿನ ಜೆ.ಜೆ. ಸ್ಕೂಲಿನಲ್ಲಿ ಪದವಿ ಪಡೆದವರು ಎಂಬ ಕಾರಣಕ್ಕಾಗಿ ಕಾರಂತರಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ಕೆಲಸ ಸಿಕ್ಕುವುದು ಹೆಚ್ಚೇನೂ ಕಷ್ಟದ ಮಾತಾಗಿರಲಿಲ್ಲ. ಸುಮಾರು ಹದಿನೈದು ವರ್ಷ ಇಲ್ಲಿ ಚಿತ್ರಕಲಾ ಶಿಕ್ಷಕನಾಗಿ ಸೇವೆಸಲ್ಲಿಸಿದರೂ ಅವರಿಗೆ ಒಂದಿಷ್ಟೂ ತೃಪ್ತಿಯೇ ಇದ್ದಿರಲಿಲ್ಲ. ಹೊಸದಾಗಿ ಬರುವ ವಿದ್ಯಾರ್ಥಿಗಳಿಗೆ ಅರಳಿ ಎಲೆ, ಆಲದ ಎಲೆಯನ್ನು ಬಿಡಿಸುವಂತೆ ಕಲಿಸುವ ಮನಸ್ಥಿತಿಗೂ, ನವ್ಯಕಲೆಯನ್ನು ಅಭ್ಯಸಿಸಿರುವ ಕಾರಂತರ ಔನ್ನತ್ಯಕ್ಕೂ ತಾಳಮೇಳ ಆಗುವುದು ಕಷ್ಟವೇ. ಅಷ್ಟಾದರೂ ವಿರಾಮದ ವೇಳೆಯಲ್ಲಿ ಒಂದಿಷ್ಟು ಚಿತ್ರ ಬಿಡಿಸಿ ಅತೃಪ್ತಿಯಿಂದಲೇ ಸೇವೆ ಸಲ್ಲಿಸಿದರು.

ಆದರೆ ಬೇರೆಡೆ ವರ್ಗಮಾಡಿದ್ದರಿಂದ ರಾಜೀನಾಮೆ ನೀಡಿ ಮಂಗಳೂರಿನ ಮಹಾಲಸಾ ಕಲಾ ಶಾಲೆಯ ಪ್ರಾಂಶುಪಾಲರಾಗಿ ಸೇರಿದರು.

"ಈ ಶಾಲೆಯಲ್ಲಿ ಅವಕಾಶ ಸಿಕ್ಕಿದ್ದು ಎಂದರೆ ತನಗೆ ಮರುಭೂಮಿಯಲ್ಲಿ ಒಂದು ಓಯೇಸಿಸ್ ಸಿಕ್ಕಿದಂತೆ ಆಯಿತು" ಎಂದವರು ಸ್ಮರಿಸಿಕೊಳ್ಳುತ್ತಾರೆ. ಆದರೆ ಎಲ್ಲಿಯೂ ತಮಗೆ ಕೊಟ್ಟ ಸಂಬಳ ಎಷ್ಟು ಎಂಬುದನ್ನು ಹೇಳುವುದಿಲ್ಲ. ಆ ವಿಚಾರವೆಲ್ಲ ಬಹಿರಂಗವಾಗುವುದೂ ಅವರಿಗೆ ಸಮ್ಮತ ಇಲ್ಲ. ಕಡಾಖಂಡಿತವಾಗಿ ತನಗೆ ಇಂಥದ್ದು ಬೇಕು ಎಂದು ಹೇಳುವುದಾಗಲಿ, ಚಿತ್ರ ಬಿಡಿಸಿಕೊಟ್ಟ ಮೇಲೆ ಅದರ ಬೆಲೆ ಇಷ್ಟು ಎಂದು ಹೇಳುವುದಾಗಲಿ, ಗಟ್ಟಿಯಾಗಿ ಮಾತನಾಡುವುದನ್ನಾಗಲಿ ಜೀವನದಲ್ಲಿಯೇ ಮಾಡದ ಕಾರಂತರನ್ನು ಕೇಳದೆ ಅಥವಾ ಅವರ ಹೆಸರನ್ನು ಹಾಕದೆ ಆಧ್ಯಾತ್ಮ ಪತ್ರಿಕೆಯೊಂದು ಅವರ ಕಲಾಕೃತಿಯೊಂದನ್ನು ಪ್ರಕಟಿಸಿತ್ತು. ಚಿತ್ರಗಳನ್ನು ಈ ರೀತಿ ಕಳವು ಮಾಡುವುದು ಸರಿಯಾದ ಕ್ರಮ ಅಲ್ಲ ಎಂದು ಕಾರಂತರು ಆಕ್ಷೇಪಿಸಿದ್ದಕ್ಕೆ ಪ್ರತಿಯಾಗಿ ಪತ್ರಿಕೆಯ ಸಂಪಾದಕ ಪತ್ರ ಬರೆದು ಬೆದರಿಕೆ ಹಾಕಿದ ಘಟನೆಯೂ ನಡೆದಿದೆ. ಚಿತ್ರ ಕಲಾವಿದರೆಂದರೆ ಉದ್ಯಮಿ ಮನಸ್ಥಿತಿಯವರು ನಿಕೃಷ್ಟವಾಗಿಯೇ ಕಾಣುತ್ತಾರಷ್ಟೆ. ಆದರೆ ಈ ವಿಷಯಗಳನ್ನು ಕಾರಂತರು ಕೆಲವು ಸ್ನೇಹಿತರಲ್ಲಿ ಮಾತ್ರ ಬಾಯ್ಬಿಡುತ್ತಾರೆ. ವಿವಾದವೆಲ್ಲವನ್ನು ಮುಚ್ಚಿ ಹಾಕುವುದಕ್ಕೆ ಕಾರಂತರು ಪ್ರಯತ್ನ ಪಡುತ್ತಾರೆ. ಈಗಿನವರೆಗೂ ಕಾರಂತರೇ ತಮ್ಮ ಚಿತ್ರ ಬಿಡಿಸಬೇಕು ಎಂದು ಮಂಗಳೂರಲ್ಲಿ ಒತ್ತಾಯ ಮಾಡುವವರಿದ್ದಾರೆ. ನಿಗದಿತವಾಗಿ ಎಷ್ಟು ಹಣ ಎಂದು ಕಾರಂತರು ಹೇಳುವುದಿಲ್ಲ. ಇದರ ದುರ್ಲಾಭ ಪಡೆದುಕೊಳ್ಳುವ ಹಲವರು ಫ್ರೇಮಿನ ಖರ್ಚನ್ನು ಸರಿಯಾಗಿ ಕೊಡದೆ ಪೇಂಟಿಂಗ್ ಪಡೆದು ಹೋಗುವವರೂ ಇಲ್ಲಿ ಸಾಕಷ್ಟು ಇದ್ದಾರೆ!.

ಈ ನಡುವೆ ಕಾರಂತರಿಗೆ ಖುಷಿ ಕೊಟ್ಟ ಮಹಾಲಸಾ ಕಲಾಶಾಲೆಯ ವಿಶೇಷ ಎಂದರೆ ಈ ಶಾಲೆಯಲ್ಲಿ ಹಲವಾರು ವರ್ಷಗಳ ತನಕ ಇವರೇ ಶಿಕ್ಷಕ ಮತ್ತು ಪ್ರಾಂಶುಪಾಲ ಎಲ್ಲವೂ ಆಗಿದ್ದರು. ಚಿತ್ರಕಲೆಯನ್ನೇ ಸಂಪೂರ್ಣವಾಗಿ ಕಲಿಯುವುದಕ್ಕಾಗಿ ಬರುವ ವಿದ್ಯಾರ್ಥಿಗಳ ದಾಹಕ್ಕೆ ತಮ್ಮಲ್ಲಿದ್ದ ಎಲ್ಲಾ ಕಲೆಯನ್ನು ಇವರು ಧಾರೆ ಎರೆಯುತ್ತಿದ್ದರಲ್ಲದೆ, ತಾವೂ ಬೇರೆ ಬೇರೆ ಪ್ರಯೋಗದಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಆ ಸಂದರ್ಭದಲ್ಲಿ ಜೆ.ಜೆ.ಯ ವಿಶಿಷ್ಟ ಶೈಲಿಯನ್ನು ಈ ಭಾಗದಲ್ಲಿ ಪ್ರಚಲಿತಪಡಿಸುವುದಕ್ಕೆ ಕಾರಂತರು ಕಾರಣಕರ್ತರು ಎಂದೇ ಹೇಳಬಹುದಾಗಿದೆ.

ಮಹಾಲಸಾ ಚಿತ್ರಕಲಾ ಶಾಲೆಯ ಬೆಳವಣಿಗೆಯೇ ದಕ್ಷಿಣ ಕನ್ನಡದ ಕಲಾ ಜೀವನದ ಒಂದು ಮುಖ್ಯವಾದ ಚಿತ್ರಣವಾಗಿದೆ. ಪ್ರಾರಂಭಿಕ ಹತ್ತು ವರ್ಷಗಳಲ್ಲಿ ಇವರ ಮುಂದಾಳುತನದಲ್ಲಿ ಈ ಕಲಾಶಾಲೆಯಲ್ಲಿ ನಮ್ಮ ಹಾಗೂ ಸಮಕಾಲೀನದ ಏನೇನೂ ಪರಿಚಯ ಇಲ್ಲದ ಕಲಾವಿದ್ಯಾರ್ಥಿಗಳನ್ನು ಹಂತಹಂತವಾಗಿ ತರಬೇತಿಗೊಳಿಸುವ ಪ್ರಯತ್ನವಾಯಿತು. ಭಾರತೀಯ, ಪಾಶ್ಚಾತ್ಯ ಕಲಾವೈಭವ, ರಚನಾ ವಿಧಾನ, ತಾಂತ್ರಿಕತೆಯನ್ನು ಮಂಗಳೂರಲ್ಲಿ ಬಿತ್ತಿ ಬೆಳೆಸುವ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡ ಕಾರಂತರು ತಮ್ಮ ಕಲಾಜೀವನ ಸಾರ್ಥಕವಾಯಿತು ಎನ್ನುತ್ತಾರೆ. ವಿದ್ಯಾರ್ಥಿಗಳನ್ನು ಕಲಾಚಟುವಟಿಕೆಗಳಲ್ಲಿ ತೊಡಗಿಸಿ, ತನ್ನನ್ನೂ ತೊಡಗಿಸಿಕೊಂಡು ಮುಂಬಯಿಯಲ್ಲಿ ಅನುಭವಿಸಿ ಮೆಚ್ಚಿದ ಕಲಾಸಿರಿವಂತಿಕೆಯನ್ನು ಇಲ್ಲಿ ಮತ್ತೆ ಮೆಲುಕುಹಾಕಿ ತೃಪ್ತಿಪಡುತ್ತಾರೆ.

ಇದೀಗ ಮಂಗಳೂರು ಸುತ್ತಲೂ ಇರುವ ಹಲವಾರು ಕಲಾಶಿಕ್ಷಕರು ಕಾರಂತರ ಶಿಷ್ಯರೇ ಆಗಿದ್ದಾರೆ. ವಿಭಿನ್ನ ವಲಯದಲ್ಲಿ ಇದೀಗ ತಮ್ಮ ವೃತ್ತಿಯನ್ನು ಕಾರಂತರ ಶಿಷ್ಯರು

ರೂಪಿಸಿಕೊಂಡಿದ್ದು, ಅವರಲ್ಲಿ ಹಲವರು ಹೊರ ರಾಜ್ಯದಲ್ಲೂ ಇದ್ದಾರೆ. ಶಿಷ್ಯರಾದ ಹರೀಶ್ ಆಚಾರ್ಯ, ಮೋಹನ್‌ಕುಮಾರ್ ಸೇರಿದಂತೆ ಹಲವರೊಟ್ಟಿಗೆ ಕಾರಂತರು ನಂತರದ ದಿನಗಳಲ್ಲಿ ಸೇರಿ ಚಿತ್ರಗಳನ್ನು ಬಿಡಿಸಿದ್ದಾರೆ. ತಾವು ಜೆ.ಜೆ.ಯಲ್ಲಿ ಪಡೆದ ಜ್ಞಾನವನ್ನು, ತಮ್ಮ ವೈಯಕ್ತಿಕ ಅನುಭವ ಎಲ್ಲವನ್ನೂ ಸೇರಿಸಿ ಇಲ್ಲಿ ಕಾರಂತರು ವಿದ್ಯಾರ್ಥಿಗಳೊಟ್ಟಿಗೆ ಸೇರಿಹೋಗಿದ್ದರು. ನಂತರ ಕಾರಂತರೇ ಹೇಳುವಂತೆ "ಕಾರಣಾಂತರದಿಂದ ಅಲ್ಲಿಯೂ ಹನ್ನೊಂದು ವರ್ಷಗಳ ಸೇವೆಯ ನಂತರ ಹೊರಕ್ಕೆ ಬಂದುಬಿಟ್ಟೆ" ಎಂದು ಮುಗಿಸುತ್ತಾರೆ.

೧೯೯೧ರಲ್ಲಿ ಹೆಸರಿಗೆ ನಿವೃತ್ತರಾದರೂ ನಂತರ ತಮ್ಮ ವಠಾರದ ಎಳೆಯ ಮಕ್ಕಳಿಗೆ ಚಿತ್ರ ಬಿಡಿಸುವುದನ್ನು ಹೇಳಿಕೊಡುವುದಕ್ಕೆ ಕಾರಂತರು ಆರಂಭಿಸಿದ್ದರು. ಒಂದೆರಡು ವರ್ಷಗಳ ಹಿಂದೆ ಅವರೇ ಒಂದು ಪ್ರದರ್ಶನ ನಡೆಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಈ ವಿದ್ಯಾರ್ಥಿಗಳು ಮತ್ತು ಕಲಾಸ್ಪಂದನ ಇವರ ಕಲಾಚಟುವಟಿಕೆಯನ್ನು ಮುಂದಿನ ದಿನಗಳಲ್ಲಿಯೂ ಹಸಿರಾಗಿಸುತ್ತ ಬಂದಿವೆ.

ಅಲ್ಲಿಂದಿಲ್ಲಿಗೂ ಪ್ರತಿವರ್ಷವೂ ಸರಾಸರಿ ಹತ್ತಿಪ್ಪತ್ತು ಚಿತ್ರಗಳನ್ನು ಕಾರಂತರು ಬಿಡಿಸುತ್ತ ಬಂದರೂ ಎಲ್ಲಿಯೂ ಒಂದು ಏಕವ್ಯಕ್ತಿ ಪ್ರದರ್ಶನವನ್ನು ಮಾಡಿಲ್ಲ. ಚಿತ್ರಗಳೂ ಅವರಲ್ಲಿ ಹೆಚ್ಚಾಗಿ ಉಳಿದಿಲ್ಲ. ಈ ನಡುವೆ ರಾಮಕೃಷ್ಣ ಮಿಷನ್‌ದ ಮೂರು ಕೇಂದ್ರದಲ್ಲಿ ತಲಾ ನಲವತ್ತರಿಂದ ಐವತ್ತರಷ್ಟು ಬಹುದೊಡ್ಡ ಚಿತ್ರಗಳಿರುವ ಖಾಯಂ ಗ್ಯಾಲರಿಯನ್ನು ಸ್ಥಾಪಿಸಲಾಗಿರುವುದೇ ಇವರ ಚಿತ್ರಗಳಿಗೆ ಒಂದು ಪ್ರದರ್ಶನ ಎಂಬಂತಾಗಿದೆ. ಇವರ ಶಿಷ್ಯರು ಎಲ್ಲೆಡೆ ಪ್ರದರ್ಶನಗಳನ್ನು ಮಾಡುತ್ತಿದ್ದಾರೆ. ಹತ್ತು ವರ್ಷಗಳ ನಂತರ ಇತ್ತೀಚೆಗೆ ಕಲಾಸ್ಪಂದನ ಎಂಬ ಸಂಘಟನೆಯನ್ನು ರಚಿಸಿ ಸಾಮೂಹಿಕ ಚಿತ್ರಕಲಾ ಕಾರ್ಯಗಾರ ನಡೆಸಿದ್ದು, ನಿಡ್ಲೆಯಂಥ ಗ್ರಾಮಾಂತರ ಪ್ರದೇಶದಲ್ಲಿ ರಾಜ್ಯಮಟ್ಟದ ಪ್ರದರ್ಶನ ಏರ್ಪಡಿಸಿದ್ದು ಇವರ ವಿಶೇಷ. ಮಂಗಳೂರಲ್ಲಿ ವಸಂತವರ್ಣ, ವರ್ಣ ನರ್ತನ, ಸುವರ್ಣ, ಯಕ್ಷವರ್ಣ ರಾಮಾಯಣ ದರ್ಶನಂ ಮುಂತಾದ ಕಾರ್ಯಾಗಾರಗಳನ್ನು ಹಲವಾರು ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ.

ಸೌಮ್ಯ, ನವ್ಯ, ಹೃದಯಂಗಮ......

ಪುರುಷೋತ್ತಮ ಕಾರಂತರ ಚಿತ್ರಗಳಲ್ಲಿ ಗಮನಿಸಬೇಕಾದ ಅಂಶ ಎಂದರೆ ಅವರು ಎಲ್ಲಿಯೂ ಪ್ರಯೋಗದಲ್ಲಿ ತಾಳತಪ್ಪುವುದಿಲ್ಲ. ಚಿತ್ರ ಬಿಡಿಸುವುದಕ್ಕೆ ಇಳಿದರೆ ಇವರ ವಿರಕ್ತಿ ದೂರ ಹೋಗಿರುತ್ತದೆ.

ಬಣ್ಣಗಳ ಬಳಕೆ, ಗೆರೆಗಳ ಬಳಕೆಯಲ್ಲಿ ಒಂದು ತಾಳ ಯಾವಾಗಲೂ ಇರುತ್ತದೆ. ಏನೋ ಒಂದು ಬಿಡಿಸಿ ಅದರ ಬಗ್ಗೆ ನೋಡುಗರಿಗೆ ವಿವರಣೆ ಕೊಡಬೇಕಾದ ಸಮಸ್ಯೆಯನ್ನು ಅವರು ಎಂದೂ ಇಟ್ಟುಕೊಳ್ಳುವುದಿಲ್ಲ. ಅದೊಂದು ಸಮಗ್ರ ಚಿತ್ರವಾಗಿರುತ್ತದೆ.

ಇದೀಗ ಒಂದೆಡೆಯಲ್ಲಿ ಲಭ್ಯ ಇರುವ ಅವರ ಚಿತ್ರಗಳನ್ನೇ ತೆಗೆದುಕೊಂಡರೆ ಇವರ ಒಟ್ಟಾರೆ ಧೋರಣೆಯನ್ನು ಅರ್ಥ ಮಾಡಿಕೊಳ್ಳಬಹುದು. ಮಾಹಿತಿಗಾಗಿ ಅವರ ಚಿತ್ರಗಳ ಗ್ಯಾಲರಿಯ ವಿವರವನ್ನು ಕೊಟ್ಟ ನಂತರವೇ ಈ ಬಗ್ಗೆ ಒಂದಿಷ್ಟು ವಿವರಣೆಕೊಡುವುದು ಸೂಕ್ತ ಎನಿಸುತ್ತದೆ.

ಕಾರಂತರ ಚಿತ್ರಗಳು ದೇಶ ವಿದೇಶಗಳಲ್ಲೆಲ್ಲ ಚದುರಿ ಹೋಗಿವೆ. ಇವುಗಳ ಪೈಕಿ ಮ್ಯೂಸಿಯಂ ರೀತಿಯಲ್ಲಿ ಇರುವ ಸ್ಥಳಗಳ ವಿವರಣೆ ಹೀಗಿದೆ.

೧. ರಾಮಕೃಷ್ಣ ಆಶ್ರಮ ಮದ್ರಾಸ್‌ನ 'ವಿವೇಕಾನಂದ ಇಲ್ಲಂ'ನಲ್ಲಿ ಭಾರತೀಯ ಪರಂಪರೆಯ ಕುರಿತು ಐವತ್ತು ತೈಲ ವರ್ಣದ ಮ್ಯೂಸಿಯಂ.

೨. ಹೈದ್ರಾಬಾದ್‌ನಲ್ಲಿರುವ ರಾಮಕೃಷ್ಣ ಆಶ್ರಮದಲ್ಲಿ ಉಪನಿಷತ್ ಆಧರಿಸಿ ೪೫ ತೈಲಚಿತ್ರಗಳು.

೩. ಚಿಂಗಲ್ಪೇಟ್ ರಾಮಕೃಷ್ಣ ಆಶ್ರಮದಲ್ಲಿ ೪೦ ತೈಲವರ್ಣ ಚಿತ್ರಗಳು.

೪. ಹೈದ್ರಾಬಾದ್ ಆಶ್ರಮದಲ್ಲಿ ಗೀತಾ ದರ್ಶನಂನಲ್ಲಿ ೧೦೮ ತೈಲ ವರ್ಣಚಿತ್ರದ ಮ್ಯೂಸಿಯಂ.

೫. ಮಂಗಳೂರಿನ ಆಶ್ರಮದಲ್ಲಿ ೪೦ ತೈಲವರ್ಣಗಳು.

೬. ಧರ್ಮಸ್ಥಳದ ನವೀಕೃತ ಬಸದಿಯಲ್ಲಿ ಕಲಾಕೆತ್ತನೆಯ ಚಿತ್ರಗಳು.

ಇವರಿಗೆ ಸಿತಾರ್ ಒಂದು ಇಷ್ಟವಾದ ಸಂಗೀತ ವಾದ್ಯ ಎಂಬುದನ್ನು ಇಲ್ಲಿ ಗಮನಿಸಬೇಕು. ಆದರಲ್ಲಿ ತಾಳ ಮತ್ತು ಲಯಗಳು ಏಕಕಾಲದಲ್ಲಿ ಸಾಗುತ್ತವೆ ಎಂಬುದು ಅವರಿಂದಲೇ ಬಂದ ವಿವರಣೆ. ಅಷ್ಟೇ ಅಲ್ಲದೆ ಅವರು ಅಧ್ಯಾತ್ಮಕ್ಕೆ ಸಂಬಂಧಿಸಿದಂತೆ ಕೆಲವು ಪುಸ್ತಕಗಳು, ಕವನ, ಕಿರು ಕತೆಗಳನ್ನೊಳಗೊಂಡ ಪುಸ್ತಕವನ್ನು ಹೊರತಂದಿದ್ದಾರೆ ಎಂಬುದನ್ನೂ ಗಮನದಲ್ಲಿ ಇಟ್ಟುಕೊಂಡು ಅವರ ಚಿತ್ರಗಳಲ್ಲಿ ಒಂದು ಪ್ರವಾಸ ಹೋಗಬೇಕಾಗುತ್ತದೆ.

ಮಿಷನ್‌ದಲ್ಲಿ ಚಿತ್ರಿಸಿದ ಚಿತ್ರಗಳ ಬಗ್ಗೆ ಅವರು ಒಂದಿಷ್ಟು ಪ್ರತ್ಯೇಕ ವಿವರಣೆಯನ್ನೇ ಕೊಡುತ್ತಾರೆ; "ನವ್ಯತೆಯ ಕೆಲವು ಗುಣಗಳು. ಮಿನಿಯೇಚರ್ ಅಥವಾ ಅಜಂತಾ ಚಿತ್ರಗಳ ಮಾದರಿ, ಕೆತ್ತಿಟ್ಟ ಮೂರ್ತಿಗಳು ಅಲ್ಲಲ್ಲಿ ಕಂಡುಬರುತ್ತದೆ. ಇವುಗಳನ್ನೆಲ್ಲ ಭಾವುಕತೆಯ ಒತ್ತಡದಿಂದಾಗಿ ನಾನು ಬಳಸಿಕೊಂಡಿದ್ದೇ ವಿನಃ ಚಿತ್ರಬಿಡಿಸುವ ಒಂದು ವಿಧಾನ ಎಂದು ಪರಿಗಣಿಸುವಷ್ಟು ಪ್ರತ್ಯೇಕತೆಯನ್ನು ಅಲ್ಲಿ ತಂದಿಲ್ಲ ಎಂದು ನಾನೇ ವಿಮರ್ಶಿಸಿಕೊಂಡಿದ್ದೇನೆ. ರಾಮಕೃಷ್ಣ ಮಿಷನ್‌ದ ಬಹಳಷ್ಟು ಆಧ್ಯಾತ್ಮಿಕ ವಿಷಯದ ಚಿತ್ರಗಳಲ್ಲಿ ಇಂಥ ನವ್ಯತೆಯ ಕಾಂಪೋಸಿಶನ್ ವಿಧಾನ ಬಳಸಿದ್ದು, ಜನ ಸಾಮಾನ್ಯರ ಹಾಗೂ ಮಿಷನ್‌ನ ಸಾಧುಗಳ ಮೆಚ್ಚಿಗೆ ಹಾಗೂ ಪ್ರೋತ್ಸಾಹ ಇತ್ತು. ಅಂದರೆ ಸಾಂಪ್ರದಾಯಿಕ ಚಿತ್ರಗಳನ್ನೇ, ಮಡಿವಂತಿಕೆ ಇಟ್ಟುಕೊಂಡವರಂತೆ ಒಪ್ಪಿಕೊಳ್ಳುವುದಕ್ಕಿಂತ ವಿಷಯದ ಅಭಿವ್ಯಕ್ತಿಗೆ ಅನುಕೂಲಕರ ಆಗುವಂತೆ ಆಧುನಿಕ ವಿಧಾನಗಳನ್ನು ಬಳಸಿಕೊಳ್ಳುವುದರಲ್ಲಿ ಆಕ್ಷೇಪ ಸಲ್ಲ. ಸಾರ್ವಜನಿಕರ ಸಂಹವನಕ್ಕೆ ಕ್ಲಿಷ್ಟ ಎಂದು ಅನ್ನಿಸದ ರೀತಿಯಲ್ಲಿ, ಅಂತಹ ಆಕಾರದ ಪರಿಕಲ್ಪನೆಯಲ್ಲಿ ಮಿಷನ್‌ದ ಮ್ಯೂಸಿಯಂಗಳಿಗೆ ಚಿತ್ರ ರಚಿಸಿಕೊಟ್ಟಿದ್ದೇನೆ"

ಎಂಬ ಈ ಮಾತುಗಳು ಒಟ್ಟಾರೆ ಅವರು ಚಿತ್ರ ಬಿಡಿಸುವಿಕೆಯ ಹಿಂದಿಟ್ಟುಕೊಂಡ ಕಲ್ಪನೆಯೂ ಹೌದು. ವೈಯಕ್ತಿಕತೆಯ ಸೋಗಿನಲ್ಲಿ ತನಗೆ ಇಷ್ಟ ಬಂದಂತೆ ಚಿತ್ರ



ಕಾಲ / Time

ಬಿಡಿಸುತ್ತೇನೆ. ನೋಡುಗರು ಬೇಕಾದರೆ ನೋಡುತ್ತಾರೆ. ಇಲ್ಲದಿದ್ದರೆ ಬಿಡುತ್ತಾರೆ ಎಂಬ ವಾದವನ್ನು ಕಾರಂತರು ಒಪ್ಪುವುದಿಲ್ಲ.

ದೇಶೀವಾದ

"ವಿದೇಶಿ ಚಿತ್ರಕಲೆಯ ಪ್ರಪಂಚದಲ್ಲಿ ಅವರು ಪ್ರಕೃತಿಯ ಬಾಹ್ಯ ಲಾಸ್ಯವನ್ನೆ ಹೆಚ್ಚಾಗಿ ಅಭಿವ್ಯಕ್ತಿಪಡಿಸುತ್ತಾರೆ. ಭಾರತೀಯರಾದ ನಾವು ವೈವಿಧ್ಯಮಯ ತಾಂತ್ರಿಕತೆ, ಸಾಂಕೇತಿಕತೆಗಳನ್ನು ಉಪಯೋಗಿಸಿ ನಿಸರ್ಗ ಸೌಂದರ್ಯದಲ್ಲಿನ ಅಂತರಂಗವನ್ನು ಅಭಿವ್ಯಕ್ತಿಸುವುದು ಸಾಧ್ಯವಾಗಬೇಕು. ಎನ್.ಎಸ್. ಬೇಂದ್ರೆ, ಕೆ.ಕೆ. ಹೆಬ್ಬಾರ್ ಅವರುಗಳು ಹಿತಮಿತವಾಗಿ ಪ್ರಯೋಗಶೀಲರಾಗಿದ್ದನ್ನು ನಾವು ಕಾಣುತ್ತೇವೆ. ಅವರು ಮಾಡಿದ ಪ್ರಯೋಗವನ್ನು, ಅದೇ ಮಿತಿಯಲ್ಲಿ ಮಾಡಬೇಕು ಎಂದೆಲ್ಲ ನಾನು ಹೇಳುವುದಿಲ್ಲವಾದರೂ, ಅವರು ನನಗೆ ಖುಷಿಕೊಟ್ಟ ಪ್ರಯೋಗಶೀಲ ಕಲಾವಿದರು. ನಮ್ಮ ಚಿತ್ರಗಳಲ್ಲಿ ಪ್ರಯೋಗಕ್ಕಾಗಿಯೇ ಪ್ರಯೋಗ ಅಲ್ಲ, ಪ್ರಯೋಗವನ್ನೇ ಮಾಡುತ್ತ ಹೋದರೆ ಸುಂದರ

ಚಿತ್ರಗಳನ್ನು ಬಿಡಿಸುವುದಕ್ಕೆ ಆಗುವುದಿಲ್ಲ. ಸೌಂದರ್ಯಕ್ಕಾಗಿ ಪ್ರಯೋಗಶೀಲತೆ ಎಂಬುದು ನನ್ನ ದೃಢ ನಂಬಿಕೆ" ಎನ್ನುತ್ತಾರೆ.

ಒಂದೆಡೆ ಪ್ರಯೋಗಶೀಲತೆಯನ್ನೇ ವಿರೋಧಿಸುವ, ಭಾರತೀಯತೆ ಎಂಬ ವಾದಕ್ಕೆ ಅಂಟಿಕೊಳ್ಳುವುದು ಒಳ್ಳೆಯದಲ್ಲ. ಭಾರತೀಯತೆ ಎಂದು ಪ್ರತಿಪಾದಿಸುವವರು ನಿಜವಾಗಿ ಭಾರತೀಯತೆಯನ್ನು ಅರ್ಥಮಾಡಿಕೊಂಡಿರುವುದಿಲ್ಲ. ಇನ್ನೊಂದೆಡೆ ವಿದೇಶಿ ಚಿತ್ರಪರಂಪರೆಯ ಅಂಧಾನುಕರಣೆ ಮಾಡುವುದರಲ್ಲೂ ಅರ್ಥವೇ ಇಲ್ಲ.

ಈ ಮೇಲಿನ ವಿಚಾರಗಳೂ ಕಾರಂತರದ್ದೇ ಆಗಿವೆ.

ಇಷ್ಟು ತಿಳಿದ ಮೇಲೆ ಕಾರಂತರ ಮಾರ್ಗ ಯಾವುದು ಎಂಬ ವಿಚಾರದಲ್ಲಿ ಯಾವ ಗೊಂದಲವೂ ಉಳಿಯುವುದಿಲ್ಲ.

ಕಾರಂತರ ಕಲಾಕೃತಿಗಳ ಬಗ್ಗೆ ಇನ್ನೊಂದಿಷ್ಟು

ಕಾರಂತರ ಚಿತ್ರಗಳಲ್ಲಿನ ಗೆರೆ ಮತ್ತು ಬಣ್ಣಗಳಲ್ಲಿ ಸಂಗೀತದ ರಾಗ ತಾಳಗಳ ಸಾಮ್ಯ ಇದೆ. ಕಾರಂತರು ಒಬ್ಬ ಹಾಡುಗಾರರಲ್ಲ, ಆದರೆ ಅದರ ಆಶಯವನ್ನು ಚಿತ್ರದಲ್ಲಿ ಬಿಂಬಿಸುವುದಕ್ಕೆ ಹಲವು ಕಡೆಯಲ್ಲಿ ಯಶಸ್ವಿಯಾಗಿದ್ದಾರೆ.

ಇಲ್ಲಿ ನೀಡಿರುವ ಹಲವು ರೇಖಾಚಿತ್ರಗಳನ್ನು, ಪೇಂಟಿಂಗ್ ಗಳನ್ನು ಗಮನಿಸಿದರೆ ಸಂಗೀತದ ಲಹರಿಯೊಟ್ಟಿಗೆ ಕೊಳಲು, ತಬಲಾಗಳು ಸಾಂಕೇತಿಕವಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಜೊತೆಗೆ ಗಮನಿಸಬೇಕಾದ ಸಂಗತಿ ಎಂದರೆ ವಸ್ತುನಿಷ್ಠ ಚಿತ್ರದಲ್ಲೂ ಎದ್ದು ಕಾಣುವ ಕಾರಂತತನ, ಕಾರಂತಸ್ಟ್ರೋಕ್ ಸಾಮಾನ್ಯ ದೃಷ್ಟಿಗೆ ಅಕಾಡೆಮಿಕ್ ಶೈಲಿಗಳಾಗಿದ್ದರೂ ವಿಷಯುಗಳಿಗೆ ಅನುಗುಣವಾಗಿ ಯೋಗ್ಯ ತಂತ್ರಗಳನ್ನು ಬಳಸಿಕೊಂಡಿರುವುದನ್ನು ಕಾಣಬಹುದು. ಚಿತ್ರಗಳಲ್ಲಿ ತಾಂತ್ರಿಕತೆಗಾಗಿ, ನಿಗೂಢತೆಯನ್ನು ಸೃಷ್ಟಿಸುವುದಕ್ಕಾಗಿಯೇ ತಂತ್ರಗಳನ್ನು ಬಳಸದೆ, ವಿಷಯಗಳ ವೈವಿಧ್ಯತೆ, ವಿಶಿಷ್ಟತೆಗೆ ತಕ್ಕಂತೆ ಒಂದು ಆರೋಗ್ಯಕರ ಮಿತಿಯಲ್ಲಿ ಬಳಸಿಕೊಳ್ಳುವುದನ್ನು ಒಪ್ಪಿಕೊಂಡು ಈ ತನಕ ಚಿತ್ರ ಬಿಡಿಸಿಕೊಂಡು ಬಂದಿದ್ದಾರೆ.

ಇವರ ಕೆಲವು ಕಲಾಕೃತಿಯಲ್ಲಿ ಸಂಗೀತವು ವಿಶಿಷ್ಟ ಭಾವು ಒತ್ತಿರುವುದನ್ನು ವಿಶೇಷ ರೀತಿಯಲ್ಲಿ ಗಮನಿಸಬಹುದು. ಇದು ಕಾರಂತರಿಗೆ ಅನನ್ಯತೆಯನ್ನು ತಂದುಕೊಟ್ಟ ಸಂಗತಿಯೂ ಹೌದು. ಚಿತ್ರಗಳಲ್ಲಿ ಮಿನಿಯೇಚರ್ ಹೋಲುವ ರೇಖೆಗಳು ಸಾಮಾನ್ಯವಾಗಿ ಕಂಡುಬರುತ್ತಿದ್ದು, ಅವರೇ ಹೇಳುವಂತೆ ಇವುಗಳು ರಾಗಮಾಲಿಕೆಗಳ ಕಲ್ಪನೆಯನ್ನು ನೋಡುಗನಲ್ಲಿ ಮೂಡಿಸುವುದಕ್ಕೆ ಯಶಸ್ವಿಯಾಗುತ್ತವೆ. ಹಾಗೆಂದು ಇವುಗಳ್ಯಾವುವೂ ಘರ್ಜನೆಯ ರಾಗವಾಗಿರುವುದಿಲ್ಲ, ಬದಲಿಗೆ ಮೋಹನರಾಗ. ರಾಗ್ ಪಹಡಿಧುನ್ ಆಧರಿಸಿಯೇ ಒಂದು ಚಿತ್ರವನ್ನು ಇವರು ರಚಿಸಿದ್ದರ ಬಗ್ಗೆ ಇಲ್ಲಿ ಚರ್ಚಿಸಬಹುದು.

ಮಂದಮಂದವಾಗಿ ಗುಡ್ಡಗಳ ಸಾಲಿನಲ್ಲಿ ಲಹರಿಯಾಗಿ ಹರಿಯುವ ಹಾಡು, ಜನಪದೀಯ ಸೊಗಡಿನೊಂದಿಗೆ ಸ್ವರಗಳಂತೆ ಒಂದೇ ಗುಂಪಿಗೆ ಸೇರಿದ ಬಣ್ಣದ ಲಹರಿಗಳು, ಸೂಕ್ಷ್ಮವಾಗಿ, ಅಸ್ಪಷ್ಟವಾಗಿ ಗುಡ್ಡದ ನೆರಳಲ್ಲಿ ಕಾಣುವ ಮನೆಗಳು. ಹಿನ್ನೆಲೆಯಲ್ಲಿ ಬೆರೆತುಕೊಳ್ಳುವ


ಜನಪದ ಹಾಡುಗಾರರ ತಂಡ... ಅವರ ಬಟ್ಟೆ ಬರೆಯ ಸೊಗಡು, ಕುಳಿತುಕೊಳ್ಳುವ ರೀತಿ... ಇಲ್ಲಿ ಮಿನಿಯೇಚರ್‌ಗಳನ್ನು ಅದ್ಭುತವಾಗಿ ಬಳಸಿಕೊಂಡಿದ್ದು ಬೇರಾವುದೇ ಕಲಾವಿದರಲ್ಲೂ ನಾವು ಕಾಣುವುದಕ್ಕೆ ಸಾಧ್ಯವಿಲ್ಲ. ಇನ್ನೊಂದೆಡೆ ಮಿನಿಯೇಚರ್ ಚಿತ್ರ ಪರಂಪರೆಯನ್ನು ಮೆಲುಕು ಹಾಕುತ್ತ ಹೋದರೆ ಇವುಗಳಿಗೆ ಸಂಗೀತದ ನಂಟಿನ ಬಹುದೊಡ್ಡ ಇತಿಹಾಸವೇ ಬಿಚ್ಚಿಕೊಳ್ಳುತ್ತಿದ್ದು, ಕಾರಂತರ ಸಂಗೀತ ಪ್ರೀತಿಯು ಇಲ್ಲಿ ಹೊಸದೊಂದು ಸಂಯೋಜನೆಯಲ್ಲಿ ವೈಶಿಷ್ಟತೆಯನ್ನು ಪಡೆಯುತ್ತದೆ.

ಇವರ ಜೀವನದ ಮೇಲೆ ಪ್ರಬಲ ಪ್ರಭಾವ ಬೀರಿರುವ ರಾಮಕೃಷ್ಣ ಮಿಷನ್ ಇವರ ಚಿತ್ರಗಳ ಗ್ಯಾಲರಿಯನ್ನೇ ಸ್ಥಾಪಿಸಿದ ಬಗ್ಗೆ ಈ ಹಿಂದೆ ಹೇಳಿದ್ದೇನೆ. ಅಲ್ಲಿ ಒಂದು ನಿರ್ದಿಷ್ಟ ಉದ್ದೇಶದೊಂದಿಗೆ, ಧಾರ್ಮಿಕ ಮನಸ್ಸುಗಳನ್ನು ತಲುಪುವ ಸ್ಪಷ್ಟತೆಯೊಂದಿಗೆ ಕಾರಂತರು ಚಿತ್ರ ಬಿಡಿಸುತ್ತಾರೆ. ಒಂದೆಡೆ ಕಾರಂತರಿಗೆ ತಾನೂ ಮಠವೊಂದರ ಆಶಯದಂತೆ ಚಿತ್ರಬಿಡಿಸುತ್ತಿದ್ದೇನೆ ಎಂಬ ಹೊಂದಾಣಿಕೆಯ ಅವಶ್ಯಕತೆ ಕಾಡಿದಂತಿದೆ. ಕೆಲವು ಚಿತ್ರಗಳಲ್ಲಿ ಸಂದೇಶ ನೀಡುವ ಅನಿವಾರ್ಯತೆಯಲ್ಲಿ ಕಲಾವಿದನ ಸ್ವಾತಂತ್ರಕ್ಕೆ ದಕ್ಕೆಯಾಗಿರಬಹುದು. ಇದೆಲ್ಲಕ್ಕಿಂತ ಇಲ್ಲಿರುವ ಹಲವು ಅದ್ಭುತ ಅಕಾಡೆಮಿಕ್ ಶೈಲಿಯ ಚಿತ್ರಗಳನ್ನು ನಾವು ವಿಶೇಷವಾಗಿ ಪರಿಗಣಿಸಬೇಕು. ಸಾಮಾನ್ಯವಾಗಿ ತಾಂತ್ರಿಕತೆ, ಸಾಂಕೇತಿಕತೆಗಳಿಗೆ ಧಾರ್ಮಿಕ ಮನಸ್ಸುಗಳು ಹೆಚ್ಚಾಗಿ ಸ್ಪಂಧಿಸಲಿಕ್ಕಿಲ್ಲ ಎಂಬ ಕಲ್ಪನೆಯನ್ನು ಮೀರಿ ಇಲ್ಲಿಯೂ ಕಲಾವಿದ ಕಾರಂತರು ಒಂದಿಷ್ಟು ಮಿಂಚಿದ್ದಾರೆ. ಅವರ ಟೆಕ್ಚರ್ (ಮೈವಳಿಕೆ) ಉಂಟುಮಾಡುವ ಪ್ರಯತ್ನ, ಬಣ್ಣಗಳ ಅದ್ಭುತ ಬಳಕೆ ಹಲವಾರು ಚಿತ್ರಗಳನ್ನು ಅನನ್ಯವಾಗಿಸುತ್ತವೆ.

ಬುದ್ಧ ಪೂರ್ಣಿಮೆ, ಹಸುರಿಗಾಗಿ ಮೊರೆ, ಪ್ರತಿಕಾರ(ಕೃತಿ) ಗಳಲ್ಲಿ ಅವಕಾಶಗಳನ್ನು (ಸ್ಪೇಸ್) ಸಮತೋಲನ ರೀತಿಯಲ್ಲಿ ಹಂಚಿರುವುದು, ಬಣ್ಣಕ್ಕೂ ವಿಷಯಕ್ಕೂ ಅದ್ಭುತ ಮೇಳ ಇತ್ಯಾದಿಗಳು ಇಲ್ಲಿ ಎದ್ದು ಕಾಣುತ್ತದೆ. ಅನಂತದೊಡನೆ, ಪೂರ್ಣಿಮೆಯಲ್ಲಿ ಲೀನವಾಗುವ ನಿರ್ವಾಣ ಬುದ್ಧ ಸೇರಿದಂತೆ ಹಲವು ಹತ್ತು ಚಿತ್ರಗಳು ನೋಡುಗನನ್ನು ಆಧ್ಯಾತ್ಮ ಪ್ರಪಂಚಕ್ಕೆ ಒಯ್ಯುತ್ತವೆ.

ಭಿತ್ತಿಚಿತ್ರಗಳಲ್ಲಿ ಅಲಂಕಾರಿಕ ಶೈಲಿಯನ್ನು ಕೆಲವೆಡೆ ಬಳಸಿಕೊಳ್ಳಲಾಗಿದೆ. ಜನಪದ ವಸ್ತುಗಳು, ಗ್ರಾಮ್ಯ ಜೀವನದ 'ತವರೂರ ಹಾದಿಯಲಿ ಕಂಚಿನ ತೇರು ಹರಿದಾವ' ಚಿತ್ರಗಳು ಯಾವುದೇ ಮುಗ್ಧನನ್ನು ತನ್ನ ತೆಕ್ಕೆಯಲ್ಲಿ ಕೆಡವಿಕೊಳ್ಳಬಲ್ಲುದು.

ಇವರ ರೇಖಾ ಚಿತ್ರಗಳ ಬಗ್ಗೆ ಒಂದಿಷ್ಟು ಹೆಚ್ಚಾಗಿಯೇ ಬರೆಯಬೇಕು ಎಂದು ಅನ್ನಿಸುತ್ತದೆ. ಹತ್ತಾರು ಪುಸ್ತಕದಲ್ಲಿ ಸುಂದರವಾಗಿ ಸಂಗ್ರಹಿಸಿಡಲಾಗಿರುವ ಈ ರೇಖಾ ಚಿತ್ರಗಳನ್ನು ಯಾವುದಾದರೂ ಪುಣ್ಯಾತ್ಮ ಪ್ರಕಟಿಸಿದರೆ ಅದೇ ಒಂದು ಅದ್ಭುತ ಕಲಾ ಸಂಪತ್ತಾಗಿ ಹೆಚ್ಚು ಕಾಲ ಉಳಿಯುತ್ತಿತ್ತೇನೋ. ರೇಖಾಚಿತ್ರಗಳಲ್ಲಿನ ಲಯ, ಸರಳತೆ, ಕನಿಷ್ಠ ಗೆರೆಗಳು, ಒಂದು ಸ್ಪಷ್ಟವಾದ ಅಂದಾಜಿನಲ್ಲಿ ಗ್ರಹಿಸಿ ಗೆರೆಗಳನ್ನು ಎಳೆದಿರುವಿಕೆಗೆ ಸಾಮಾನ್ಯ ಪರಿಣಿತಿ ಖಂಡಿತವಾಗಿಯೂ ಸಾಕಾಗುವುದಿಲ್ಲ. ಗೆರೆಗಳಲ್ಲಿ ಒಂದಕ್ಕೊಂದು ಲಯ ಪೂರ್ಣವಾಗಿ ಹೊಂದಿಕೊಂಡು, ಸಮತೋಲನ ಕಂಡು ಬರುತ್ತವೆ. ಬಿಳಿಯ ಹಾಳೆಗಳಲ್ಲಿ ಕಪ್ಪು ಗೆರೆಗಳಿಂದ ಬಿಡಿಸಿದ ಆ ಸರಳ ಚಿತ್ರಗಳು ಕೆಲವೊಮ್ಮೆ ಪೇಂಟಿಂಗ್‌ಗಳಿಗಿಂತ ಹೆಚ್ಚು ಖುಷಿಕೊಡುತ್ತವೆ.



ಧರ್ಮಶ್ರದ್ಧೆ / Faith

